ದಶಮಾನೋತ್ಸವ ವರ್ಷ

# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳುವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

ಸ್ವಾಯತ್ತತೆ,
ಸ್ವಯಂ ಆಡಳಿತ,
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

ಸಂಪುಟ 8 : ಸಂಚಿಕೆ 3 : ಮಾರ್ಚ್ 2011 : • ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ • ವಾರ್ಷಿಕ ಚಂದಾ 50/– : ಬೆಲೆ ₹ 5




ಸಂಯುಕ್ತ ಸಹಕಾರಿ ಅಧ್ಯಕ್ಷ ಶ್ರೀ ಎಸ್.ಆರ್. ಸತೀಶಚಂದ್ರರೊಂದಿಗೆ ರಾಜ್ಯದ ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾದ ಪ್ರಾಂತೀಯ ಅಧಿಕಾರಿ ಶ್ರೀ ರವಿಕುಮಾರರವರು ಮಾನ್ಯ ಮುಖ್ಯಮಂತ್ರಿಗಳಿಗೆ 'ಇ-ಸ್ಟಾಂಪಿಂಗ್' ಕೇಂದ್ರಗಳ ಸಂಖ್ಯೆ 350ಕ್ಕೆ ತಲುಪಿರುವುದನ್ನು ತಿಳಿಸಿದರು. ಚಿತ್ರದಲ್ಲಿ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷ ಶ್ರೀ ಗುರುನಾಥ ಜ್ಯಾಂತಿಕರ, ನಿರ್ದೇಶಕ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಮುಂತಾದವರಿದ್ದಾರೆ.



## ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿ ಕುರಿತು ಚರ್ಚೆ

# ಮುಖ್ಯಮಂತ್ರಿಯವರ ಭೇಟಿ – ಮನವಿ ಪತ್ರ ಸಲ್ಲಿಕೆ

ಯಲಹಂಕದಲ್ಲಿ ಮಹಾಯೋಗಿ ವೇಮನ ಸೌಹಾರ್ದ ಪತ್ತಿನ ಸಹಕಾರಿ ನಿ., ನೂತನ ಕಛೇರಿ ಉದ್ಘಾಟನೆ





ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆ ನೌಕರರ ಸೌಹಾರ್ದ ಪತ್ತಿನ ಸಹಕಾರಿ ನಿ., ತುಮಕೂರು ಸರ್ವಸದಸ್ಯರ ಸಭೆ

ಒಳಪುಟಗಳಲ್ಲಿ...


ಅಧ್ಯಕ್ಷರ ನುಡಿ....................2
ಸೌಹಾರ್ದ ಸಹಕಾರಿಗಳ ಸಮಾಚಾರಗಳು....................3,4
ಲೇಖನ....................5
ಸೌಹಾರ್ದ ಸಹಕಾರಿ ದಿನಾಚರಣೆ....................6,7
ನಿಮ್ಮ ಪ್ರಶ್ನೆಗಳಿಗೆ ಉತ್ತರ....................8,9
ಲೇಖನಗಳು....................10
ಲೆಕ್ಕ ಪರಿಶೋಧಕರಿಗೆ ಮಾಹಿತಿ....................11
ಸಹಕಾರಿಗಳು ಖಾತೆ ತೆರೆಯುವ ಬಗ್ಗೆ....................12


ಸೌಹಾರ್ದ ಸಹಕಾರಿಗಳ ಸಂಖ್ಯೆ : 1625 - 'ಇ' ಸ್ಟಾಪಿಂಗ್ ಕೇಂದ್ರಗಳ ಸಂಖ್ಯೆ - 350



## ಅಧ್ಯಕ್ಷರ ನುಡಿ....

> ಸಂಯುಕ್ತ ಸಹಕಾರಿಯ ಲೆಕ್ಕಪರಿಶೋಧಕರ ಪಟ್ಟಿಯಲ್ಲಿರಲು ಅಪೇಕ್ಷೆಯಿರುವ ಪ್ರತಿಯೊಬ್ಬ ಲೆಕ್ಕಪರಿಶೋಧಕರು ಈ ತರಬೇತಿ ಕಾರ್ಯಕ್ರಮಕ್ಕೆ ಹಾಜರಾಗುವುದನ್ನು ಕಡ್ಡಾಯವೆಂದು ಸೂಚಿಸಲಾಗಿತ್ತು. ಈ ಬಾರಿಯ ಕಾರ್ಯಾಗಾರಗಳಲ್ಲಿ ದಿನಾಂಕ 25-1-2011ರಂದು ಬೆಂಗಳೂರಿನಲ್ಲಿ, 27-1-2011ರಂದು ಬೆಳಗಾವಿಯಲ್ಲಿ, 31-1-2011ರಂದು ಗುಲ್ಬರ್ಗಾದಲ್ಲಿ ನಡೆಸಲಾಯಿತು. ಈ ಕಾರ್ಯಾಗಾರದಲ್ಲಿ ಒಟ್ಟಾರೆ 377 ಲೆಕ್ಕಪರಿಶೋಧಕರು ಭಾಗವಹಿಸಿರುವುದು ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಪೂರಕವಾಗಿದೆ.

# ಗುಣಾತ್ಮಕ ಲೆಕ್ಕಪರಿಶೋಧನೆ – ಲೆಕ್ಕಪರಿಶೋಧಕರ ಕಾರ್ಯಾಗಾರ

ರಾಜ್ಯದ ಸೌಹಾರ್ದ ಸಹಕಾರಿ ಚಳುವಳಿಯ ನೇತೃತ್ವ ವಹಿಸಿರುವ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ಸೌಹಾರ್ದ ಸಹಕಾರಿಗಳ ಲೆಕ್ಕಪರಿಶೋಧನೆ ಕಾರ್ಯನಿರ್ವಹಿಸುತ್ತಿರುವ ಲೆಕ್ಕಪರಿಶೋಧಕರಿಗಾಗಿ ಜನವರಿ 2011 ಮಾಹೆಯಲ್ಲಿ ದಿನಾಂಕ 25ರಂದು ಬೆಂಗಳೂರಿನಲ್ಲಿ, 27ರಂದು ಬೆಳಗಾವಿಯಲ್ಲಿ, 31ರಂದು ಗುಲ್ಬರ್ಗಾದಲ್ಲಿ ತರಬೇತಿ ಕಾರ್ಯಾಗಾರವನ್ನು ಏರ್ಪಡಿಸಲಾಗಿತ್ತು. ಎರಡು ವರ್ಷಗಳ ಹಿಂದೆ ಇದೇ ರೀತಿಯ ತರಬೇತಿಯನ್ನು ಬೆಂಗಳೂರಿನಲ್ಲಿ ಪ್ರಪ್ರಥಮಬಾರಿಗೆ ಏರ್ಪಡಿಸಿ ಲೆಕ್ಕಪರಿಶೋಧಕರಿಗೆ ಸೌಹಾರ್ದ ಸಹಕಾರಿ ಕಾಯ್ದೆ ಹಾಗೂ ಇತರೆ ಕಾನೂನುಗಳು ಸಂಯುಕ್ತ ಸಹಕಾರಿಯ ಮಾರ್ಗಸೂಚಿಗಳನ್ನು ಅವಲೋಕಿಸಿ ಲೆಕ್ಕಪರಿಶೋಧನೆ ಮಾಡಿದಲ್ಲಿ ಒಂದು ಗುಣಾತ್ಮಕವಾದ ವರದಿಯನ್ನು ನೀಡಲು ಸಾಧ್ಯವಾಗುತ್ತದೆ ಎಂದು ತಿಳಿಸಲಾಗಿತ್ತು.

ಕಳೆದೆರಡು ವರ್ಷಗಳಿಂದ ಲೆಕ್ಕಪರಿಶೋಧಕರು ಮಾಡಿದ ಲೆಕ್ಕಪರಿಶೋಧನಾ ವರದಿಗಳನ್ನು ಸಂಯುಕ್ತ ಸಹಕಾರಿಯು ಅನುಭವಿ ತಜ್ಞರಿಂದ ಮನರಾವಲೋಕನ ಮಾಡಿಸಿದೆ. ಆಡಿಟ್ ವರದಿಗಳ ಮನರಾವಲೋಕನ ಸಂದರ್ಭಗಳಲ್ಲಿ ಕೆಲವು ಮಹತ್ವದ ಲೋಪ ದೋಷಗಳನ್ನು ಗಮನಿಸಲಾಗಿದೆ. ಇವುಗಳಲ್ಲಿ ಬಹುಮುಖ್ಯವಾಗಿ ಲೆಕ್ಕಪರಿಶೋಧನಾ ವರದಿಗೆ ದೃಢೀಕರಣ ಪತ್ರ ಹಾಕದಿರುವುದು, ನಿಗದಿತ ನಮೂನೆಗಳಲ್ಲಿ ವರದಿ ಸಲ್ಲಿಸದಿರುವುದು, ನಮೂನೆಗಳನ್ನು ಬದಲಾಯಿಸಿ ವರದಿ ಸಲ್ಲಿಸುವುದು, ತಮ್ಮದೆ ಆದ ನಮೂನೆಯಲ್ಲಿ ವರದಿ ಸಲ್ಲಿಸುವುದು, ಸಲ್ಲಿಸಬೇಕಾದ ಮಾಹಿತಿಯಲ್ಲಿ ಕಡಿತಗೊಳಿಸುವುದು, ಆರ್ಥಿಕ ತಃಖ್ತೆಗಳಲ್ಲಿರುವ ಅಂಕಿ ಅಂಶಗಳಿಗೂ ಹಾಗೂ ವರದಿಯಲ್ಲಿನ ಅಂಕಿ ಅಂಶಗಳಿಗೂ ವ್ಯತ್ಯಾಸವಿರುವುದು, ದ್ರವ್ಯಾಸ್ತಿ ನಿರ್ವಹಣೆಯ ಬಗ್ಗೆ ಸರಿಯಾಗಿ ಮಾಹಿತಿ ನೀಡದಿರುವುದು ಆಡಳಿತಾತ್ಮಕವಾಗಿ ಸಹಕಾರಿಗಳು ಅನೇಕ ತಪ್ಪುಗಳನ್ನು ಮಾಡಿದ್ದಾಗ್ಯು ವರದಿಯಲ್ಲಿ ನಮೂದಿಸದಿರುವುದು, ಮಾಹಿತಿಗಳನ್ನು ಲಗತ್ತಿಸಲಾಗಿದೆ ಎಂದು ಬರೆದು ಯಾವುದೆ ಮಾಹಿತಿಯನ್ನು ಲಗತ್ತಿಸದೆ ವರದಿ ಕಳಿಸುವುದು ಹೀಗೆ ಇನ್ನೂ ಅನೇಕ ದೋಷಗಳನ್ನು ಗಮನಿಸಲಾಗಿದೆ.

ಈ ದೋಷಗಳು ಮನರಾವರ್ತನೆಯಾಗಬಾರದು ಎಂಬ ಉದ್ದೇಶದಿಂದ ಸಂಯುಕ್ತ ಸಹಕಾರಿಯು ಈ ಕಾರ್ಯಾಗಾರಕ್ಕೆ ಮುಂದಾಗಿದೆ. ಸಂಯುಕ್ತ ಸಹಕಾರಿಯ ಲೆಕ್ಕಪರಿಶೋಧಕರ ಪಟ್ಟಿಯಲ್ಲಿರಲು ಅಪೇಕ್ಷೆಯಿರುವ ಪ್ರತಿಯೊಬ್ಬ ಲೆಕ್ಕಪರಿಶೋಧಕರು ಈ ತರಬೇತಿ ಕಾರ್ಯಕ್ರಮಕ್ಕೆ ಹಾಜರಾಗುವುದನ್ನು ಕಡ್ಡಾಯವೆಂದು ಸೂಚಿಸಲಾಗಿತ್ತು. ಈ ಬಾರಿಯ ಕಾರ್ಯಾಗಾರಗಳಲ್ಲಿ ದಿನಾಂಕ 25–1–2011ರಂದು ಬೆಂಗಳೂರಿನಲ್ಲಿ, 27–1–2011ರಂದು ಬೆಳಗಾವಿಯಲ್ಲಿ, 31–1–2011ರಂದು ಗುಲ್ಬರ್ಗಾದಲ್ಲಿ ನಡೆಸಲಾಯಿತು. ಈ ಕಾರ್ಯಾಗಾರದಲ್ಲಿ ಒಟ್ಟಾರೆ 377 ಲೆಕ್ಕಪರಿಶೋಧಕರು ಭಾಗವಹಿಸಿರುವುದು ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಪೂರಕವಾಗಿದೆ. ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ಹೆಚ್ಚಿನ ಶಕ್ತಿಯನ್ನು ತುಂಬಲು ಇವರುಗಳು ಹೆಚ್ಚು ಶ್ರಮ ವಹಿಸುತ್ತಾರೆಂದು ಆಶಿಸಲಾಗಿದೆ.

ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರ ದಿನದಿಂದ ದಿನಕ್ಕೆ ಪ್ರಗತಿಯತ್ತ ದಾಪುಗಾಲು ಹಾಕುತ್ತಿದೆ. ಸೌಹಾರ್ದ ಸಹಕಾರಿಗಳ ಸಂಖ್ಯೆ ಈ 1625ಕ್ಕೆ ಏರಿದೆ. ಈ ಎಲ್ಲ ಸಹಕಾರಿಗಳ ಆರೋಗ್ಯವನ್ನು ಕಾಪಾಡುವ ಜವಾಬ್ದಾರಿ ಲೆಕ್ಕಪರಿಶೋಧಕರಿಗಿದೆ. ಅದನ್ನು ಯಶಸ್ವಿಯಾಗಿ ನಿರ್ವಹಿಸಲೆಂದು ಸಂಯುಕ್ತ ಸಹಕಾರಿಯು ಅಪೇಕ್ಷಿಸುತ್ತದೆ.

ಎಸ್.ಆರ್.ಸತೀಶಚಂದ್ರ
ಅಧ್ಯಕ್ಷರು.

# ತುಮಕೂರು ಮರ್ಚೆಂಟ್ಸ್ ಸೌಹಾರ್ದ ಸಹಕಾರಿಯ ನೂತನ ಶಾಖೆ ಪ್ರಾರಂಭ



ತುಮಕೂರಿನ ಮರ್ಚೆಂಟ್ಸ್ ಸೌಹಾರ್ದ ಸಹಕಾರಿಯ 3ನೇ ಶಾಖೆಯನ್ನು 28 ಫೆಬ್ರುವರಿ 2011ರಂದು ತುಮಕೂರಿನ ಎಮ್.ಜಿ.ರಸ್ತೆಯಲ್ಲಿ ಪ್ರಾರಂಭಿಸಲಾಯಿತು. ಸಿದ್ಧಗಂಗಾಮಠದ ಡಾ. ಶ್ರೀ ಶಿವಕುಮಾರ ಸ್ವಾಮಿಗಳ ದಿವ್ಯಸಾನಿಧ್ಯದಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳ ಹಾಗೂ ಪತ್ತಿನ ಸಹಕಾರ ಸಂಘಗಳ ಒಕ್ಕೂಟದ ಅಧ್ಯಕ್ಷ ಶ್ರೀ ಹೆಚ್. ಕೆ. ಪಾಟೀಲರವರು ಶಾಖೆಯನ್ನು ಉದ್ಘಾಟಿಸಿದರು.

ಸಂಸದ ಶ್ರೀ ಜಿ.ಎಸ್.ಬಸವರಾಜರವರು ದೀಪ ಬೆಳಗಿಸಿದರು. ಶಾಸಕರಾದ ಶ್ರೀ ಎಸ್.ಶಿವಣ್ಣರವರು ಸೇಫ್ ಡಿಪಾಸಿಟ್ ಲಾಕರನ್ನು ವಿಧಾನ ಪರಿಷತ ಸದಸ್ಯ ಶ್ರೀ ಮನೋಹರ ಮಸ್ಕಿ ಕಂಪ್ಯೂಟರೀಕರಣವನ್ನು, ಡಿ.ಸಿ.ಸಿ ಬ್ಯಾಂಕಿನ ಅಧ್ಯಕ್ಷ ಶ್ರೀ ಕೆ.ಎನ್. ರಾಜಣ್ಣ ಕ್ಯಾಶ್‌ಕೌಂಟರನ್ನು ಮಾಜಿ ಶಾಸಕ ಶ್ರೀ ಮಾಧುಸ್ವಾಮಿಯವರು ವೀಸಾಕಾರ್ಡಗಳನ್ನು ವಿತರಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷ ಶ್ರೀ ಎನ್.ಎಸ್. ಜಯಕುಮಾರರವರು ವಹಿಸಿದ್ದರು.

ದಿನಾಂಕ 30-4-2006ರಂದು 1054 ಸದಸ್ಯರೊಂದಿಗೆ ತುಮಕೂರು, ಬೆಂಗಳೂರು, ಬೆಂಗಳೂರು ಗ್ರಾಮಾಂತರ ಕಾರ್ಯವ್ಯಾಪ್ತಿಯೊಂದಿಗೆ ಪ್ರಾರಂಭವಾಗಿರುವ ಈ ಸಹಕಾರಿಯು ಇಂದು 12000ಕ್ಕೂ ಹೆಚ್ಚು ಖಾತೆದಾರರನ್ನು ಹೊಂದಿದೆ. ಅತ್ಯಾಧುನಿಕ ತಾಂತ್ರಿಕ ಸೇವೆ ನೀಡುತ್ತಿದೆ. ಷೇರು ಸಂಗ್ರಹಣೆ, ಠೇವಣಾತಿ, ಸಾಲ,ವಸೂಲಾತಿ, ನಿವ್ವಳ ಲಾಭಗಳಿಕೆ ಎಲ್ಲದರಲ್ಲೂ ಒಳ್ಳೆಯ ಸಾಧನೆಯನ್ನೆ ಮಾಡಿದೆ. ಪ್ರತಿ ವರ್ಷದಲ್ಲಿ ಶೇಕಡಾ 100% ವಸೂಲಾತಿ ಈ ಸಹಕಾರಿಯ ವೈಶಿಷ್ಟ್ಯವೆನಿಸಿದೆ. ಸಹಕಾರಿಯ ಎಲ್ಲ ಶಾಖೆಗಳೂ ಸಂಪೂರ್ಣವಾಗಿ ಗಣಕೀಕೃತವಾಗಿರುವುದು ಎ.ಬಿ/ಬಿ/ ಸೇವೆ ಎನಿ ಬ್ರಾಂಚ ಬಿಸಿನೆಸ್ ಸೌಲಭ್ಯ, ಲಾಕರ್ಸ್, ಇ-ಸ್ಟಾಂಪಿಂಗ್, ವಿದೇಶಿ ವಿನಿಮಯ ಸೌಲಭ್ಯ, ಇ-ಕೆರಿಗೆ ಪಾವತಿ, ಇ-ಬ್ಯಾಟ್ ಪಾವತಿ ಆರ್.ಟಿ.ಜಿ.ಎಸ್. ಎನ್.ಇ.ಎಫ್.ಟಿ., ಜನರಲ್ ಇನ್ಸುರೆನ್ಸ್, ಮತ್ತು ಜೀವವಿಮಾ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.ಮೊಬೈಲ್ ಬ್ಯಾಂಕಿಂಗ್ ಸೇವೆ ವೀಸಾ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ಜಿಲ್ಲೆಯಲ್ಲಿಯೇ ಅತ್ಯುತ್ತಮ ಸೇವೆಗಳನ್ನು ಒದಗಿಸುವ ಸೌಹಾರ್ದ ಸಹಕಾರಿ ಎಂದು ಹೆಸರು ಪಡೆದಿದೆ. ಇತ್ತೀಚೆಗೆ ಐ.ಎಸ್.ಓ. 9001-2008 ಪ್ರಶಸ್ತಿ ಪಡೆದ ಸೌಹಾರ್ದ ಸಹಕಾರಿ ಇದಾಗಿದೆ. 2009-10 ಸಾಲಿನಲ್ಲಿ 15 % ಡಿವಿಡೆಂಡ್ ನೀಡಲಾಗಿದೆ.

# ಯಲಹಂಕದಲ್ಲಿ ಮಹಾಯೋಗಿ ವೇಮನ ಸೌಹಾರ್ದ ಪತ್ತಿನ ಸಹಕಾರಿ ನಿ., ನೂತನ ಕಛೇರಿ ಉದ್ಘಾಟನೆ




ದಿನಾಂಕ 13/02/2011ರ ಭಾನುವಾರ ಬೆಂಗಳೂರು ನಗರ ಜಿಲ್ಲೆಯ, ಯಲಹಂಕ ಉಪನಗರದಲ್ಲಿರುವ ಮಹಾಯೋಗಿ ವೇಮನ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತದ ನೂತನ ಕಛೇರಿಯನ್ನು ಸಹಕಾರಿಯ ಅಧ್ಯಕ್ಷರಾದ ಎಂ.ಮುನಿರೆಡ್ಡಿಯವರ ಅಧ್ಯಕ್ಷತೆಯಲ್ಲಿ, ಸ್ಥಳೀಯ ಯಲಹಂಕ ವಿಧಾನಸಭಾ ಕ್ಷೇತ್ರದ ಶಾಸಕರಾದ ಎಸ್.ಆರ್. ವಿಶ್ವನಾಥ್‌ರವರು ಉದ್ಘಾಟಿಸಿದರು.

ಈ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಸ್ಥಳೀಯ ಬಿ.ಬಿ.ಎಂ.ಪಿ. ಸದಸ್ಯರಾದ ಎಂ.ಮುನಿರಾಜುರವರು, ವೈ.ಎನ್.ಅಶ್ವಥ್‌ರವರು, ಶ್ರೀಮತಿ ಗೀತಾ ಶಶಿಕುಮಾರ್‌ರವರು ಹಾಗೂ ಸಹಕಾರ ಸಂಘಗಳ ಅಪರ ನಿಬಂಧಕರಾದ ಶ್ರೀಯುತ ಆರ್.ಎಸ್. ಹುಬ್ಬಾಚಾರಿಯವರು ಉಪಸ್ಥಿತರಿದ್ದರು.

ಶ್ರೀ ಶ್ರೀ ಶ್ರೀ ವೇಮನಾನಂದಪುರಿ ಸ್ವಾಮೀಜಿ, ರೆಡ್ಡಿ ಗುರುಪೀಠ, ಇವರು ಆಶೀರ್ವಚನವನ್ನು ನೀಡಿದರು.

"ಸಂಯುಕ್ತ ಸಹಕಾರಿಯ ನೂತನ ಕೇಂದ್ರ ಕಚೇರಿ ವಿಳಾಸ"
ಸಂಯುಕ್ತ ಸಹಕಾರಿಯು ತನ್ನ ಕಚೇರಿಯನ್ನು "ಇ-ಸ್ಟಾಂಪಿಂಗ್ ವಿಭಾಗವೂ ಸೇರಿದಂತೆ ಪೂರ್ಣ ಪ್ರಮಾಣದಲ್ಲಿ ಈ ವಿಳಾಸಕ್ಕೆ ಬದಲಾಯಿಸಿ ಕಾರ್ಯಾಚರಣೆಯನ್ನು ಪ್ರಾರಂಭ ಮಾಡಿದೆ. ಸಹಕಾರಿಗಳು ಹಾಗೂ ಸಾರ್ವಜನಿಕರು ಗಮನಿಸಲು ಕೋರಿದೆ.

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**
**# ನಿರ್ಮಾಣ ಭವನ ಆವರಣ , ಡಾ. ರಾಜಕುಮಾರ ರಸ್ತೆ**
**(ವಿವೇಕಾನಂದ ಕಾಲೇಜು ಎದುರು)**
**ಒಂದನೇ ಬ್ಲಾಕ್ ರಾಜಾಜಿನಗರ ಬೆಂಗಳೂರು-560010**
**ದೂ.ಸಂ : 23378375/76/77/78/79/80**
**ಹಾಗೂ 23474408, 23573291**

### ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗಾಗಿ ಕುರಿತ ಚರ್ಚೆ

# ಮಾನ್ಯ ಮುಖ್ಯಮಂತ್ರಿಯವರ ಭೇಟಿ – ಮನವಿ ಪತ್ರ ಸಲ್ಲಿಕೆ



ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗಾಗಿ ಸೌಹಾರ್ದ ಸಹಕಾರಿ ಕಾಯ್ದೆಯ ತಿದ್ದುಪಡಿ, ಸೌಹಾರ್ದ ಸಹಕಾರಿಗಳಿಗೆ ಇ-ಸ್ಟಾಂಪಿಂಗ್ ನೀಡಿ ಪ್ರೋತ್ಸಾಹಿಸಿದಂತೆ ಸರಕಾರದ ಇನ್ನೂ ಕೆಲವು ಯೋಜನೆಗಳನ್ನು ನೀಡುವಂತೆ ಹಾಗು ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಅಗತ್ಯವಾದ ಕೆಲವು ವಿಷಯಗಳ ಬಗ್ಗೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಎಸ್.ಆರ್.ಸತೀಶಚಂದ್ರರವರ ನೇತೃತ್ವದಲ್ಲಿ ಉಪಾಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತಿಕರ ನಿರ್ದೇಶಕರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿಯವರುಗಳು ಮುಖ್ಯಮಂತ್ರಿ ಶ್ರೀ ಬಿ.ಎಸ್.ಯಡಿಯೂರಪ್ಪನವರನ್ನು ಭೇಟಿಮಾಡಿ ಚರ್ಚಿಸಿ ಮನವಿಪತ್ರ ಸಲ್ಲಿಸಿದರು.

# ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕಿನಲ್ಲಿ ಇ-ಸ್ಟಾಂಪಿಂಗ್ ಪ್ರಾರಂಭ




ಬೆಲ್ಲದ ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕಿನಲ್ಲಿ ಇ-ಸ್ಟಾಂಪಿಂಗ ಸೇವೆಯನ್ನು ಪೂಜ್ಯ ಶ್ರೀ ಶಿವಾನಂದ ಮಹಾಸ್ವಾಮಿಗಳು ಉದ್ಘಾಟಿಸಿದರು. ಬ್ಯಾಂಕಿನ ಅಧ್ಯಕ್ಷ ಶ್ರೀ ಮಲ್ಲಿಕಾರ್ಜುನ ಬೆಲ್ಲದ ನಿರ್ದೇಶಕ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿವರ್ಗದವರು ಸದಸ್ಯರು ಉಪಸ್ಥಿತರಿದ್ದರು.



ಶ್ರೀ ವೈ. ಕುಮಾರ
ಉಪಪ್ರಧಾನ ವ್ಯವಸ್ಥಾಪಕರು

ರಾಜ್ಯದ ಸಹಕಾರ ಕ್ಷೇತ್ರದ ಇತಿಹಾಸದಲ್ಲಿ ಮೈಲುಗಲ್ಲೆನಿಸಿರುವ ಸೌಹಾರ್ದ ಸಹಕಾರಿ ಚಳುವಳಿ ಒಂದು ದಶಕವನ್ನು ಪೂರೈಸಿದೆ. 2001 ರಲ್ಲಿ ಜಾರಿಗೆ ಬಂದಿರುವ ಸೌಹಾರ್ದ ಸಹಕಾರಿ ಕಾಯ್ದೆ ಮೂಲಭೂತವಾಗಿ ಸ್ವಾಯತ್ತತೆ, ಸ್ವಯಂ ಆಡಳಿತ ಹಾಗೂ ಸ್ವಯಂ ನಿಯಂತ್ರಣವನ್ನು ತನ್ನ ಧ್ಯೇಯವನ್ನಾಗಿಸಿಕೊಂಡು ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿರುವ ಈ ಸಂದರ್ಭದಲ್ಲಿ, ಸೌಹಾರ್ದ ಸಹಕಾರಿ ಕ್ಷೇತ್ರ ಇನ್ನು ದೊಡ್ಡದಾಗಿ ಬೆಳೆಯಬೇಕು ಅದಕ್ಕೆ ಪೂರಕವಾಗಿ ಸಹಕಾರಿಗಳು ಸೌಹಾರ್ದ ಸಹಕಾರಿ ಕಾಯ್ದೆಯ ಆಶಯ ಹಾಗೂ ಸೌಹಾರ್ದ ಸಹಕಾರಿ ಕಾಯ್ದೆಯ ಕಾನೂನಿನ ಅಂಶಗಳನ್ನು ಹೆಚ್ಚು ಮನನ ಮಾಡಿಕೊಳ್ಳಬೇಕಾಗಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತದ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀಯುತ ವೈ. ಕುಮಾರ್‌ರವರು ಈ ಲೇಖನದ ಮೂಲಕ ಸೌಹಾರ್ದ ಸಹಕಾರಿ ಕಾಯ್ದೆಯನ್ನು ಸಹಕಾರಿಗಳಿಗೆ ಪುನರ್ಮನನಮಾಡುವ ಉದ್ದೇಶ ಹೊಂದಿದ್ದಾರೆ. ಸಹಕಾರಿಗಳ ಅನುಕೂಲದ ದೃಷ್ಟಿಯಿಂದ ಈ ಪತ್ರಿಕೆಯಲ್ಲಿ ಅವರ ಲೇಖನವನ್ನು ಪ್ರಕಟಿಸಲಾಗುತ್ತಿದೆ. ಓದುಗರು ಇದರ ಪ್ರಯೋಜನ ಪಡೆಯಲು ಕೋರಿದೆ.



# ಸೌಹಾರ್ದ ಸಹಕಾರಿ ಕಾಯ್ದೆ ಆಶಯ




ಭಾಗ –1

## ಉದ್ದೇಶ ಮತ್ತು ಕಾರಣಗಳ ಹೇಳಿಕೆ

ಭಾರತದ ಸಂವಿಧಾನದಲ್ಲಿ ಪ್ರಸ್ತಾವನೆ ಯಾವ ರೀತಿಯಲ್ಲಿ ಸಂವಿಧಾನದ ಭಾಗವಾಗಿದೆಯೋ, ಸಂವಿಧಾನದ ಅವಿಭಾಜ್ಯ ಅಂಗವಾಗಿದೆಯೋ, ಇಡೀ ಸಂವಿಧಾನದ ಆಶಯವನ್ನು ಪ್ರಕಟ ಪಡಿಸುತ್ತದೆಯೋ ಹಾಗೆಯೇ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರಲ್ಲಿ "ಉದ್ದೇಶ ಮತ್ತು ಕಾರಣಗಳ ಹೇಳಿಕೆ" ಇಡೀ ಕಾಯ್ದೆಯ ಉದ್ದೇಶ ಮತ್ತು ಆಶಯವನ್ನು ವ್ಯಕ್ತಪಡಿಸುತ್ತದೆ. ಸಹಕಾರಿ ಕ್ಷೇತ್ರವನ್ನು ಪುನರ್‌ಸಂಘಟಿಸುವ ದೃಷ್ಟಿಯಿಂದ ಕೇಂದ್ರ ಯೋಜನಾ ಆಯೋಗದ ಸಲಹೆಯ ಮೇರೆಗೆ ಜಾರಿಗೆ ಬಂದ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ನ್ನು ಪೂರ್ಣವಾಗಿ ಅಧ್ಯಯನ ಮಾಡುವ ಪೂರ್ವದಲ್ಲಿ ಈ ಕಾಯ್ದೆಯ ಉದ್ದೇಶ ಮತ್ತು ಕಾರಣಗಳ ಹೇಳಿಕೆಗಳನ್ನು ತಿಳಿದುಕೊಳ್ಳುವುದು ಅವಶ್ಯಕ. ಇದಕ್ಕೆ ಸಂಬಂಧಿಸಿದಂತೆ ಒಂದು ಮಹತ್ವದ ಅಂಶವನ್ನು ಎಲ್ಲರೂ ಗಮನಿಸಬೇಕಾಗುತ್ತದೆ.

ಇಡೀ ಕಾಯ್ದೆಯ ಸಂಪೂರ್ಣ ಆಶಯ, ಕಾಯ್ದೆಯನ್ನು ರಚಿಸುವಾಗ ಕಾಯ್ದೆ ರಚನಾ ಸಮಿತಿಯವರು ಹೊಂದಿದ್ದ ಅಪೇಕ್ಷೆ, ಸೌಹಾರ್ದ ಸಹಕಾರಿ ಕಾಯ್ದೆಯನ್ನು ಜಾರಿಗೆ ತರುವ ಮೂಲಕ ಸಹಕಾರಿ ಕ್ಷೇತ್ರದಲ್ಲಿ ಅಪೇಕ್ಷಿತ ಬದಲಾವಣೆ, ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದಂತೆ ತಿಳಿಯಬೇಕಾದ ಪೂರ್ಣಪಾಠ, ಉದ್ದೇಶ ಹಾಗೂ ಕಾರಣಗಳ ಹೇಳಿಕೆಯಲ್ಲಿದೆ.

ಸೌಹಾರ್ದ ಸಹಕಾರಿ ಕಾಯ್ದೆ ಜಾರಿಗೆ ಬಂದ ಕಳೆದ ಹತ್ತು ವರ್ಷಗಳಲ್ಲಿ ಹಲವು ಬಾರಿ ಈ ಬಗ್ಗೆ ಚರ್ಚೆಗಳು ನಡೆದಿವೆ. ಒಟ್ಟಾರೆ 5 ಅಂಶಗಳಲ್ಲಿ ಈ ಆಶಯಗಳನ್ನು ಹೇಳಲಾಗಿದೆ. ಸೌಹಾರ್ದ ಸಹಕಾರಿ ಕಾಯ್ದೆಯನ್ನು ಅಧ್ಯಯನ ಮಾಡುವ ಮೊದಲು ಉದ್ದೇಶ ಮತ್ತು ಕಾರಣಗಳನ್ನು ಅಧ್ಯಯನ ಮಾಡುವದು ಅವಶ್ಯಕ ಎಂಬುವುದಕ್ಕೆ ಈ ಹೇಳಿಕೆಗಳು ಪುಷ್ಟೀಕರಿಸುತ್ತವೆ.

(1) "ಸದಸ್ಯರೇ ಸಂಪೂರ್ಣ ಒಡೆತನ ಹೊಂದಿರುವ, ನಿರ್ವಹಿಸುವ ಮತ್ತು ನಿಯಂತ್ರಿಸುವ, ಸ್ವಸಹಾಯ ಮತ್ತು ಪರಸ್ಪರ ನೆರವಿನ ಮೇಲೆ ಆಧಾರಿತವಾದ, ಸಹಕಾರಿ ತತ್ವಗಳಿಂದ ಮಾರ್ಗದರ್ಶನ ಪಡೆದ, ಜವಾಬ್ದಾರಿಯುತ, ಸ್ಪರ್ಧಾತ್ಮಕ, ಸ್ವಾವಲಂಬಿ ಆರ್ಥಿಕ ಉದ್ದಿಮೆಗಳಾದ ಸಹಕಾರಿಗಳಿಗೆ ಮಾನ್ಯತೆ ಮತ್ತು ಅವುಗಳ ಸ್ವಯಂ ರಚನೆಗೆ ಪ್ರೋತ್ಸಾಹ ನೀಡುವುದು."

* ಈ ಮೇಲ್ಕಂಡ ಅಂಶ (1) ರ ಪ್ರತಿ ವಾಕ್ಯವನ್ನು ಪುನಃ ಮತ್ತೊಂದು ಬಾರಿ ಓದಿದಾಗ ಪೂರ್ಣವಾಗಿ ಅರ್ಥಮಾಡಿಕೊಳ್ಳಬಹುದಾಗಿದೆ. ಈ ಕಾಯ್ದೆಯನ್ನು ಯಾತಕ್ಕಾಗಿ, ಯಾವ ಉದ್ದೇಶಕ್ಕಾಗಿ ಜಾರಿಗೆ ತರಬೇಕಾಗಿದೆ. ಈ ಕಾಯ್ದೆ ಜಾರಿಯಿಂದ ಸಹಕಾರಿ ಕ್ಷೇತ್ರದಲ್ಲಿ ಯಾವ ರೀತಿಯ ಬದಲಾವಣೆಯನ್ನು ನಿರೀಕ್ಷಿಸಬಹುದಾಗಿದೆ ಎಂಬ ವಿಷಯಗಳನ್ನು ಕಾಯ್ದೆ ರಚನಾಕಾರರು ಅಳವಡಿಸಲು ಯೋಚಿಸಿದ್ದರು ಎಂಬುದನ್ನು ತಿಳಿಯಬಹುದು.
* ಸದಸ್ಯರು ಸಹಕಾರಿಯ ಸಂಪೂರ್ಣ ಒಡೆತನ ಹೊಂದಿರಬೇಕು. ಸಹಕಾರಿಯ ಆಡಳಿತವನ್ನು ಸದಸ್ಯರೆ ಪೂರ್ಣ ಪ್ರಮಾಣದಲ್ಲಿ ನಿರ್ವಹಿಸಬೇಕು. ಸದಸ್ಯರೇ ಸಹಕಾರಿಯನ್ನು ನಿಯಂತ್ರಿಸುವ ಅಧಿಕಾರವನ್ನು ಹೊಂದಿರಬೇಕು ಎಂಬುದಕ್ಕೆ ಹೆಚ್ಚಿನ ಒತ್ತು ನೀಡಲಾಗಿದೆ.
* ಸಹಕಾರಿ ತತ್ವಗಳಿಂದ ಮಾರ್ಗದರ್ಶನ ಪಡೆದ ಜವಾಬ್ದಾರಿಯುತ ಸಹಕಾರಿಗಳನ್ನು ಈ ಕ್ಷೇತ್ರದಲ್ಲಿ ಹೆಚ್ಚಿಸಬೇಕು. ಇಂತಹ ಸಹಕಾರಿಗಳು ಸ್ಪರ್ಧೆಯನ್ನು ಎದುರಿಸುವಂತಹ ಸಾಮರ್ಥ್ಯವನ್ನು ಬೆಳೆಸಿಕೊಳ್ಳಲು ಸಾಧ್ಯ ಎಂಬುದು ಇದರ ಆಶಯವಾಗಿದೆ. ಸಹಕಾರಿಗಳು ಸ್ವಾವಲಂಬಿಯಾಗಿ ಬೆಳೆಯಲು ಅವಕಾಶ ಕಲ್ಪಿಸುವುದು ಇದರ ಆಶಯವಾಗಿದೆ. ಎಲ್ಲಕ್ಕಿಂತ ಮೇಲಾಗಿ ಸಹಕಾರಿಗಳು ಉತ್ತಮ ಆರ್ಥಿಕ ಸಂಘಟನೆಗಳಾಗಿ ಬೆಳೆಯಲು ಪೂರ್ಣ ಅವಕಾಶ ಒದಗಿಸುವ ಮಹತ್ವದ ಆಶಯ ಇದಾಗಿದೆ.

(2) ನೋಂದಣಿ ಮತ್ತು ರದ್ದಿಯಾತಿಗಳನ್ನು ಬಿಟ್ಟು ಉಳಿದಂತೆ ಸಹಕಾರಿಗಳ ಮುಕ್ತ ಕಾರ್ಯಾಚರಣೆಗೆ ತಡೆಯೊಡ್ಡುವ ಸರಕಾರದ ಎಲ್ಲ ರೀತಿಯ ನಿರ್ಬಂಧಗಳು ಮತ್ತು ನಿಯಂತ್ರಣಗಳು ಮತ್ತು ಹಸ್ತಕ್ಷೇಪವನ್ನು ನಿವಾರಿಸುವುದು;

ಕಾಯ್ದೆಯ ಪ್ರಮುಖ ಆಶಯಗಳಲ್ಲಿ ಅಂಶ (2)ರಲ್ಲಿನ ವಿವರಣೆ ಅತ್ಯಂತ ಪ್ರಮುಖವಾದುದಾಗಿದೆ. ಸೌಹಾರ್ದ ಸಹಕಾರಿ ಅಧಿನಿಯಮದಡಿ ನೋಂದಣಿಗೊಳ್ಳುವ ಸಹಕಾರಿಗಳಿಗೆ ಸಂಬಂಧಿಸಿದಂತೆ ಸರ್ಕಾರದ ಪಾತ್ರವೇನು ಎಂಬ ಅಂಶವನ್ನು ಅತ್ಯಂತ ಸರಳವಾಗಿ ವಿವರಿಸಲಾಗಿದೆ. ಕಾಯ್ದೆಯನ್ನು ಅರ್ಥೈಸುವಾಗ ಉಂಟಾಗುವ ಗೊಂದಲಗಳಿಗೆ, ವಿಭಿನ್ನ ಅರ್ಥವಿವರಣೆಗೆ, ಅವಕಾಶವಾಗದಂತೆ, ಒಂದು ವೇಳೆ ವಿಭಿನ್ನ ಅರ್ಥವಿವರಣೆಗಳು ಬಂದರೆ, ಈ ಕಾಯ್ದೆಯ ಆಶಯ ಏನು ಎಂಬುದನ್ನು ಅತ್ಯಂತ ಸರಳ ಶಬ್ದಗಳಲ್ಲಿ ಕಾಯ್ದೆ ರಚನಾಕಾರರು ಈ ಅಂಶದಲ್ಲಿ ವಿವರಿಸಿದ್ದಾರೆ.

ಸಹಕಾರಿ ಕ್ಷೇತ್ರದಲ್ಲಿ ಮಹತ್ವದ ಪರಿವರ್ತನೆಯನ್ನು ನಿರೀಕ್ಷಿಸಿ ಸೌಹಾರ್ದ ಸಹಕಾರಿ ಕಾಯ್ದೆಯನ್ನು ಜಾರಿಗೆ ಕೊಡಲಾಗಿದೆ ಆದ್ದರಿಂದ ಈ ಆಶಯಗಳಿಗೆ ಹೆಚ್ಚಿನ ಮಹತ್ವನೀಡಬೇಕಾಗುತ್ತದೆ.


ವಿಪ್ರ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಧಾರವಾಡ.


ಉದಯ ರವಿ ಸೌಹಾರ್ದ ಪತ್ತಿನ ಸಹಕಾರಿ ನಿ., ತಿಪಟೂರು.


ಮಾರ್ಕಂಡೇಶ್ವರ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಹುಬ್ಬಳ್ಳಿ


ಚಾಮುಂಡೇಶ್ವರಿ ಸೌಹಾರ್ದ ಪತ್ತಿನ ಸಹಕಾರಿ ನಿ., ತಿಪಟೂರು.


ಮೈಸೂರು ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಮೈಸೂರು.


ಜೈ ಹಿಂದ್ ಸೌಹಾರ್ದ ಪತ್ತಿನ ಸಹಕಾರಿ ನಿ., ಹುಕ್ಕೇರಿ, ಬೆಳಗಾವಿ.


ಶ್ರೀ ನೀಲಕಂಠೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಮುದಗಲ್ಲು
ತಾ. ಲಿಂಗಸೂಗೂರು ಜಿ.ರಾಯಚೂರು.


ಶ್ರೀದೇವಾಂಗ ಸೌಹಾರ್ದ ಕ್ರೆಡಿಟ್-ಕೋ-ಆಪ್ ಲಿ., ಬೆಂಗಳೂರು.

## "ಸೌಹಾರ್ದ ಸಹಕಾರಿ ದಿನಾಚರಣೆ"

ಆತ್ಮೀಯ ಸಹಕಾರಿ ಬಂಧುಗಳೇ,

ರಾಜ್ಯದಲ್ಲಿ 2011 ಜನೇವರಿ 1 ರಂದು ಸೌಹಾರ್ದ ಸಹಕಾರಿ ಕಾಯ್ದೆ ಜಾರಿಗೆ ಬಂದು 10 ವರ್ಷಗಳಾಗಿದ್ದುದರ ಹಿನ್ನೆಲೆಯಲ್ಲಿ ದಶಮಾನೋತ್ಸವವನ್ನು ಆಚರಿಸುವ ಬಗ್ಗೆ ಮತ್ತು ಜನೇವರಿ 1 ರಂದು ಸೌಹಾರ್ದ ಸಹಕಾರಿ ದಿನವನ್ನಾಗಿ ಆಚರಿಸಲು ಸಂಯುಕ್ತ ಸಹಕಾರಿಯ ಸೂಚನೆಗೆ ಎಲ್ಲ ಸಹಕಾರಿಗಳು ಸ್ಪಂದಿಸಿರುವುದು ಅತ್ಯಂತ ಹೆಮ್ಮೆಯ ಹಾಗೂ ಸಂತೋಷದ ವಿಷಯ. ಎಲ್ಲ ಸಹಕಾರಿಗಳ ಅಧ್ಯಕ್ಷರು ಪದಾಧಿಕಾರಿಗಳು ಅಧಿಕಾರಿಗಳು ಹಾಗು ಸಿಬ್ಬಂದಿಯವರು ಅತ್ಯಂತ ಸಂತೋಷದಿಂದ ಹಾಗು ಉತ್ಸಾಹದಿಂದ ಈ ದಿನವನ್ನು ಆಚರಿಸಿದ ಬಗ್ಗೆ ಬಹಳಷ್ಟು ವರದಿಗಳು ಬಂದಿವೆ. ಧ್ವಜಾರೋಹಣ ಮಾಡಿ ಸದಸ್ಯರಿಗೆ ಸಿಹಿ ಹಂಚುವುದು, ಸೌಹಾರ್ದ ಸಹಕಾರಿ ಕಾಯ್ದೆಯ ಪ್ರಚಾರ ಮಾಡುವುದು, ವಿಚಾರಗೋಷ್ಠಿಗಳನ್ನು ಏರ್ಪಡಿಸುವುದು, ಉಚಿತ ಕಣ್ಣಿನ ತಪಾಸಣೆ ಹಾಗು ಶಸ್ತ್ರಚಿಕಿತ್ಸೆ ನಡೆಸುವುದು, ಸದಸ್ಯರಿಂದ ಠೇವಣಿ ಸಂಗ್ರಹಿಸುವುದು, ಸಾಲ ವಿತರಿಸುವುದು ವಿದ್ಯಾರ್ಥಿಗಳಿಗೆ ಸಹಕಾರ ಕುರಿತು ಪ್ರಬಂಧ ಸ್ಪರ್ಧೆ ಹಾಗು ಚರ್ಚಾಗೋಷ್ಠಿಗಳನ್ನು ಏರ್ಪಡಿಸಿ ಬಹುಮಾನ ವಿತರಿಸುವುದು, ಹಿರಿಯ ಸದಸ್ಯರನ್ನು ಗೌರವಿಸುವುದು, ಕರ ಪತ್ರಗಳನ್ನು ವಿತರಿಸುವುದು, ಶಾಲಾ ಮಕ್ಕಳಿಂದ ವಿವಿಧ ಮನರಂಜನಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು, ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಮೂಲಕ ತಾವುಗಳೆಲ್ಲ ವೈಶಿಷ್ಟ್ಯಪೂರ್ಣವಾಗಿ ಪರಿಣಾಮಕಾರಿಯಾಗಿ ಆಚರಿಸಿದ ಬಗ್ಗೆ ತಮ್ಮ ವರದಿಯನ್ನು ಗಮನಿಸಿದಾಗ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗಾಗಿ ತಾವೆಲ್ಲ ಬದ್ಧತೆಯುಳ್ಳವರು ಎಂಬುವುದು ಮತ್ತೊಮ್ಮೆ ದೃಢಪಡುತ್ತದೆ. ತಮಗೆಲ್ಲರಿಗೂ ಅಭಿನಂದನೆಗಳು. ಇದೇ ರೀತಿಯಲ್ಲಿ ಮುಂದಿನ ದಿನಗಳಲ್ಲಿ ಕಾರ್ಯನಿರ್ವಹಿಸಬೇಕೆಂಬುದು ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯ ಅಪೇಕ್ಷೆಯಾಗಿದೆ.



ಆಳವಂಡಿ ಗ್ರಾಮೀಣ ವಿವಿದೋದ್ದೇಶ ಸೌಹಾರ್ದ ಸಹಕಾರಿ ಆಳವಂಡಿ ಕೊಪ್ಪಳ.



ದೈವಜ್ಞ ಪತ್ತಿನ ಸೌಹಾರ್ದ ಸಹಕಾರಿ ನಿ., ಧಾರವಾಡ.





ಶ್ರೀ ಗಣೇಶ್ ಸೌಹಾರ್ದ ಕ್ರೆಡಿಟ್ ಕೋ-ಆಪ್ ಲಿ., ಉಡುಪಿ


ಶ್ರೀ ಚಾಮುಂಡೇಶ್ವರಿ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ.,ಚಾಮರ



ಸವಿತಾ ಸಮಾಜ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಅಂಬಲಪಾಡಿ



ಅಮೃತ ವಿವಿದ್ದೋದ್ದೇಶ ಸೌಹಾರ್ದ ಸಹಕಾರಿ ನಿ., ಗರ್ತಿಕೆರೆ, ಹೊಸನಗ
ಶಿವಮೊಗ್ಗ ಜಿಲ್ಲೆ.



ಶ್ರೀಕಾಂತ್ ಬದುವೆ

ರಾಜ್ಯದ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಸಭೆಯಲ್ಲಿ ನಡೆದ ಪ್ರಶ್ನೋತ್ತರ ಅಧಿವೇಶನದಲ್ಲಿನ ಆಯ್ದ ಕೆಲವು ಪ್ರಶ್ನೆಗಳಿಗೆ ಉತ್ತರಗಳನ್ನು, ಎಲ್ಲ ಸೌಹಾರ್ದ ಸಹಕಾರಿಗಳ ಮಾಹಿತಿ ಹಾಗೂ ಅನುಕೂಲತೆಗಾಗಿ ಪ್ರಕಟಿಸಲಾಗಿದೆ. "ಕಲಂ" ಎಂದರೆ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಕಲಂ, "ನಿಯಮ" ಎಂದರೆ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004ರ ನಿಯಮಗಳು ಎಂದು ಓದಿಕೊಳ್ಳತಕ್ಕದ್ದು.

ಉತ್ತರಿಸಿದವರು : ಶ್ರೀ ಎಸ್.ಎಸ್. ಜೋಶಿ, ಸಹಕಾರ ಸಂಘಗಳ ಸಹಾಯಕ ನಿಬಂಧಕರು.
ನೆರವು : ಶ್ರೀ ಕಾಂತ್ ಬದುವೆ, ಕಾನೂನು ವಿಭಾಗದ ಅಧಿಕಾರಿ, ಸಂಯುಕ್ತ ಸಹಕಾರಿ.

# ನಿಮ್ಮ ಪ್ರಶ್ನೆ ನಮ್ಮ ಉತ್ತರ




ವೆಂಕಟೇಶಮೂರ್ತಿ ಶ್ರೀ ರಾಮೇಶ್ವರ ಸೌಹಾರ್ದ ಸಹಕಾರಿ ನಿ.ತೀರ್ಥಹಳ್ಳಿ.

**● ಸಹಕಾರಿಯ ಕಟ್ಟಡ ನಿರ್ಮಿಸಲು ಸಾಮಾನ್ಯ ಮೀಸಲು ನಿಧಿಯ ಶೇಕಡಾ 80ನ್ನು ಬಳಸಿಕೊಳ್ಳಲು ನಿಬಂಧಕರ ಅನುಮತಿ ಪಡೆಯಬೇಕೇ?**

ಸೌಹಾರ್ದ ಸಹಕಾರಿ ನಿಯಮ 7(1)(ಬಿ)ರ ಪ್ರಕಾರ ಕಟ್ಟಡ ನಿರ್ಮಿಸಲು ನಿಬಂಧಕರ ಅನುಮೋದನೆ ಪಡೆದು ಶೇಕಡಾ 80 ವರೆಗಿನ ಮೊಬಲಗನ್ನು ಈ ಉದ್ದೇಶಕ್ಕಾಗಿ ಬಳಸಿಕೊಳ್ಳಬಹುದು.

**● ಡಿವಿಡೆಂಡ ನೀಡಲು ಕಾಲಮಿತಿ ಇದೆಯೆ? ಅವಧಿ ಮುಗಿದ ಮೇಲೆ ಅದನ್ನು ಏನು ಮಾಡಬೇಕು?**

ಸಾಮಾನ್ಯವಾಗಿ ಸಹಕಾರಿಯ ಉಪವಿಧಿಗಳಲ್ಲಿ ಈ ಬಗ್ಗೆ ಸ್ಪಷ್ಟವಾದ ಪ್ರಾವಧಾನ ಮಾಡಿಕೊಳ್ಳಬೇಕಾಗಿರುತ್ತದೆ. 3 ವರ್ಷ ಅವಧಿಯೊಳಗಾಗಿ ಸಹಕಾರಿಯ ಸದಸ್ಯನು ತನ್ನ ಲಾಭಾಂಶ ತೆಗೆದುಕೊಳ್ಳುವದಿಲ್ಲವೋ ಅಂತಹ ಸದಸ್ಯನಿಗೆ ಸೂಚನೆ ಕೊಟ್ಟ ನಂತರವೂ ತೆಗೆದುಕೊಳ್ಳದಿದ್ದಲ್ಲಿ ಆ ಡಿವಿಡೆಂಡನ್ನು ಸಾಮಾನ್ಯ ಮೀಸಲು ನಿಧಿಗೆ ಜಮಾ ಮಾಡಬಹುದು. ಆದರೆ ಈ ರೀತಿ ಅವಕಾಶ ಮಾಡಿಕೊಳ್ಳದಿದ್ದಲ್ಲಿ ಅದನ್ನು ಮೀಸಲು ನಿಧಿಗೆ ಜಮಾ ಮಾಡಲು ಬರುವದಿಲ್ಲ. ಅದನ್ನು ಕೊಡತಕ್ಕ ಡಿವಿಡೆಂಡ ಎಂದು ಆಸ್ತಿ ಜವಾಬ್ದಾರಿ ತಃಖ್ತೆಯಲ್ಲಿ ತೋರಿಸಬೇಕಾಗಿರುತ್ತದೆ.

ಶ್ರೀಮತಿ ವಿಶಾಲಾಕ್ಷಿ ಪುತ್ತೂರು.

**● ಸಹಕಾರಿಯ ನಿಧಿಗಳನ್ನು ಯಾವುದಕ್ಕೆಲ್ಲ ಉಪಯೋಗಿಸಬಹುದು.?**

ನಿಧಿಗಳನ್ನು ಪ್ರಚಲಿತ ವಿಧಿ ವ್ಯವಸ್ಥೆಯಲ್ಲಿ ಸ್ವೀಕಾರಾರ್ಹ ಹೂಡಿಕೆಗಳು ಮತ್ತು ವಿನಿಯೋಗಗಳಿಗಾಗಿ ಸಹಕಾರಿಯ ಚಟುವಟಿಕೆಗಳಿಗೆ ಪೂರಕವಾದ ಚರ, ಸ್ಥಿರ ಆಸ್ತಿಗಳನ್ನು ಹೊಂದಲು, ಉಪಯೋಗಿಸಬಹುದು.

ಹಿರೇಬಾಗೇವಾಡಿ ಬಸವೇಶ್ವರ ಸೌಹಾರ್ದ ಸಹಕಾರಿ.

**● ಸಹಕಾರಿಯ ಶೇರುಮಾರ್ಕೆಟ್, ಎಲ್.ಐ.ಸಿ.ಮ್ಯುಚ್ಯುವಲ್ ಫಂಡ್‌ಗಳಲ್ಲಿ ಬಂಡವಾಳ ಹೂಡಬಹುದೆ?**

ಬಂಡವಾಳ ಹೂಡುವಂತಿಲ್ಲ. ಕಲಂ 18 ರ ಪ್ರಕಾರ ನ್ಯಾಸ ಅಧಿನಿಯಮ 1882ರ 20ನೇಯ ಕಲಂ 20ರಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಭದ್ರತೆಗಳಲ್ಲಿ ಅಥವಾ ಯಾವುದೇ ಸಹಕಾರಿ ಬ್ಯಾಂಕು ಅಥವಾ ಅನುಸೂಚಿತ ಬ್ಯಾಂಕಿನಲ್ಲಿ ಹೂಡಬಹುದು ಅಥವಾ ಠೇವಣಿ ಇಡಬಹುದು.

ಎಮ್.ಎಸ್.ರೇಣುಕಾ ಸಂಡೂರು.

**● ಸಹಕಾರಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಯ ಬದಲಿಗೆ ಬೇರೆ ಸಿಬ್ಬಂದಿಗೆ ಚೆಕ್ ಬೌನ್ಸ್ ಇತ್ಯಾದಿ ಕೇಸುಗಳಲ್ಲಿ ವ್ಯಾಜ್ಯ ಹೂಡಲು ಅಧಿಕಾರ ನೀಡಲು ಸೌಹಾರ್ದ ಸಹಕಾರಿ ಕಾಯ್ದೆಯಲ್ಲಿ ಅವಕಾಶ ಇದೆಯೆ?**

ಕಾಯ್ದೆ ಕಲಂ 31(2)(ಬಿ) ಪ್ರಕಾರ ಸಹಕಾರಿಯ ಮುಖ್ಯಕಾರ್ಯ ನಿರ್ವಹಣಾಧಿಕಾರಿಯು ಸಹಕಾರಿಯ ಮುಖ್ಯ ಆಡಳಿತಾಧಿಕಾರಿಯಾಗಿದ್ದು, ಸಹಕಾರಿಯ ಪರವಾಗಿ ದಸ್ತಾವೇಜುಗಳಿಗೆ ಸಹಿ ಮಾಡತಕ್ಕದ್ದು ಮತ್ತು ಒಪ್ಪಂದ ಮತ್ತು ಕರಾರುಗಳನ್ನು ಮಾಡಿಕೊಳ್ಳತಕ್ಕದ್ದು ಮತ್ತು ದಾವೆಗಳನ್ನು ಮತ್ತು ಇತರ ಕಾನೂನು ವ್ಯವಹರಣೆಗಳನ್ನು ಹೂಡತಕ್ಕದ್ದು ಮತ್ತು ಪ್ರತಿಪಾದಿಸತಕ್ಕದ್ದು.

**● ಸಹಕಾರಿಯ ಅಧ್ಯಕ್ಷರು ಆಡಳಿತಾತ್ಮಕವಾಗಿ ಮಾಡಿದ ಯಾವುದೆ ವಿಷಯವನ್ನು ಮುಖ್ಯ ಕಾರ್ಯನಿರ್ವಹಣಾಧಿಕಾರಿಯು ತಿರಸ್ಕರಿಸಬಹುದೆ?**

ಆಡಳಿತಾತ್ಮಕವಾಗಿ ಮಾಡಿದ ವಿಷಯವನ್ನು ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ತಿರಸ್ಕರಿಸುವಂತಿಲ್ಲ. ಆ ರೀತಿ ಮಾಡಿದಲ್ಲಿ ಅದು ಕರ್ತವ್ಯಲೋಪವಾಗುತ್ತದೆ. ಇದಲ್ಲದೇ ಅಧ್ಯಕ್ಷರ ಆದೇಶದ ಉಲ್ಲಂಘನೆಯಾಗುತ್ತದೆ. ಆ ರೀತಿ ಮಾಡಿದಲ್ಲಿ ಶಿಸ್ತು ಕ್ರಮಕ್ಕೆ ಒಳಗಾಗಬೇಕಾಗುತ್ತದೆ.

ಎ.ಕೆ.ದೇಸಾಯಿ. ಶ್ರೀ ಬಸವೇಶ್ವರ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ.ಸಂಕೇಶ್ವರ.

**● ಸಹಕಾರಿಯ ಸಾಮಾನ್ಯ ಸಭೆಯನ್ನು 15 ಏಪ್ರಿಲ್ ಒಳಗಾಗಿ ಜರುಗಿಸಬಹುದೆ?**

ಸಾಮಾನ್ಯ ಸಭೆಗೆ ಸ್ಪಷ್ಟ 15 ದಿವಸಗಳ ಮುಂಚೆ ಸೂಚನಾ ಪತ್ರವನ್ನು (ಸಾಮಾನ್ಯವಾಗಿ ಎಲ್ಲಾ ಸಹಕಾರಿಗಳ ಉಪವಿಧಿಯಲ್ಲಿ 15 ದಿನಗಳ ಅವಧಿಯನ್ನು ಹೇಳಲಾಗಿರುತ್ತದೆ) ಪ್ರತಿಯೊಬ್ಬ ಸದಸ್ಯನಿಗೂ ಕಡ್ಡಾಯವಾಗಿ ಕಳಿಸಿಕೊಡಬೇಕಾಗುತ್ತದೆ (ಉಪವಿಧಿಯ ತಿದ್ದುಪಡಿ ಇದ್ದಲ್ಲಿ 20 ಸ್ಪಷ್ಟ ದಿನಗಳ ನೋಟೀಸ್) ಇದಲ್ಲದೇ ಮುಖ್ಯಕಾರ್ಯನಿರ್ವಹಣಾಧಿಕಾರಿಯ ಲೆಕ್ಕಪರಿಶೋಧನಾ ವರದಿಯನ್ನು ಮಂಡಳಿಯ ಅನುಮೋದನೆಗಾಗಿ ಹಾಜರಪಡಿಸಬೇಕಾಗಿರುತ್ತದೆ, ಹಾಗೆ ಮಂಡಲಿಯ ಅನುಮೋದನೆಗೆ ಹಾಜುರುಪಡಿಸಲು 7ದಿನಗಳ ಮೊದಲು ನೋಟೀಸನ್ನು ನೀಡಿ ಸಹಕಾರಿಯ ಆಡಳಿತ ಮಂಡಳಿಯ ಸಭೆಯನ್ನು ಕರೆಯಬೇಕಾಗುತ್ತದೆ. ಆದ್ದರಿಂದ ಸಾಮಾನ್ಯ ಸಭೆಯನ್ನು ಕರೆಯಲು ವರ್ಷ ಮುಕ್ತಾಯವಾದ 22 ದಿನಗಳು(ಉಪವಿಧಿ ತಿದುಪಡಿ ಇಲ್ಲದಿರುವಾಗ) ಬೇಕಾಗುತ್ತದೆ. ಆದ್ದರಿಂದ ಏಪ್ರಿಲ್ 15ರ ಒಳಗೆ ಸಾಮಾನ್ಯ ಸಭೆಯನ್ನು ಕರೆಯಲು ಸಾಧ್ಯವಿರುವುದಿಲ್ಲ ಅಲ್ಲದೆ, ಕಾಯ್ದೆ ಕಲಂ 33(3)ರನ್ವಯ ವರ್ಷ ಮುಕ್ತಾಯವಾದ 60 ದಿನಗಳ ಒಳಗಾಗಿ ಮಂಡಲಿಯು ಹಣಕಾಸು ವಿವರ ಪತ್ರಗಳನ್ನು ತಯಾರಿಸತಕ್ಕದ್ದು ಮತ್ತು ಹಾಜುರುಪಡಿಸತಕ್ಕದ್ದು. ಈ ಎರಡೂ ಅಂಶಗಳನ್ನು ಏಪ್ರಿಲ್ 15 ರ ಒಳಗಾಗಿ ಪೂರ್ತಿ ಮಾಡಲು ಸಾಧ್ಯವಿಲ್ಲದ್ದರಿಂದ, ಸಹಕಾರಿಯ ಸಾಮಾನ್ಯ ಸಭೆಯನ್ನು 15 ಏಪ್ರಿಲ್ ಒಳಗಾಗಿ ಜರುಗಿಸಲು ಸಾಧ್ಯವಿಲ್ಲ.

ಕೊಟ್ರೇಶಿ ಹಿರೇಮಠ ಸುವರ್ಣ ಸೌಹಾರ್ದ ಸಹಕಾರಿ ನಿ.ಹಂಪನಹಳ್ಳಿ.

**● ಯಾವುದೆ ಒಬ್ಬ ಸದಸ್ಯನು 3 ಸಾಮಾನ್ಯ ಸಭೆಗೆ ಗೈರುಹಾಜರಾಗಿ, ಕನಿಷ್ಠ ವ್ಯವಹಾರವನ್ನೂ ಮಾಡದೇ ಮತದಾನದ ಹಕ್ಕನ್ನು ಕಳೆದುಕೊಂಡಮೇಲೆ ಅವರ ಹೆಸರನ್ನು ಮತದಾನದ ಪಟ್ಟಿಯಲ್ಲಿ ಸೇರಿಸಿದರೆ ಅದು ಅಪರಾಧವೆ? ದಂಡನೀಯವೇ?**

ಕಲಂ 68(1)(2) ರ ಪ್ರಕಾರ ಮೇಲ್ಕಂಡ ಸಂದರ್ಭದಲ್ಲಿ ಯಾವುದೇ ಸದಸ್ಯನ ಹೆಸರನ್ನು ಮತದಾನದ ಪಟ್ಟಿಯಲ್ಲಿ ಸೇರಿಸಿದರೆ, ಈ ರೀತಿ ಸುಳ್ಳು ಮಾಹಿತಿಯನ್ನು ಉದ್ದೇಶ ಪೂರ್ವಕವಾಗಿ ಒದಗಿಸಿದ್ದಾನೆಂದು ಭಾವಿಸಿ ಮುಖ್ಯಕಾರ್ಯನಿರ್ವಹಣಾಧಿಕಾರಿಯ ಮೇಲೆ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಿಸಬಹುದು. ಅಲ್ಲದೆ ಅಂತಹ ಕೃತಿಯು ಅಪರಾಧವಾಗುತ್ತಿದ್ದು ದಂಡನೀಯ ಅಪರಾಧವಾಗುತ್ತದೆ.



ವಿಶ್ವಗುರು ಶ್ರೀ ಬಸವೇಶ್ವರ ಸೌಹಾರ್ದ ಪತ್ತಿನ ಸಹಕಾರಿ ನಿ ಹಿರೇಹಡಗಲಿ.

● **ಸಹಕಾರಿಯ ಒಬ್ಬ ನಿರ್ದೇಶಕ ಮರಣಹೊಂದಿದಾಗ ಖಾಲಿಯಾಗುವ ನಿರ್ದೇಶಕ ಸ್ಥಾನವನ್ನು ಯಾವರೀತಿಯಲ್ಲಿ ಭರ್ತಿಮಾಡಿಕೊಳ್ಳಬೇಕು.?**

ಕಾಯ್ದೆ ಕಲಂ 29ರನ್ವಯ ನಿರ್ದೇಶಕನು ಮರಣ ಹೊಂದಿದಾಗ, ರಿಕ್ತ ಸ್ಥಾನವನ್ನು ಉಳಿದ ಅವಧಿಗೆ ಅರ್ಹ ಸದಸ್ಯರುಗಳಿಂದ ಆಡಳಿತ ಮಂಡಳಿಯು ಅವುಗಳನ್ನು ತುಂಬಬಹುದು. ಆದರೆ ಅಂತಹ ರಿಕ್ತತೆಯ ಉಳಿದ ಅವಧಿಯು 6 ತಿಂಗಳಿಗಿಂತ ಕಡಿಮೆ ಇದ್ದಲ್ಲಿ, ಅಂತಹ ಯಾವ ಆಯ್ಕೆಯನ್ನು ಮಾಡತಕ್ಕದ್ದಲ್ಲ.

ವೀರರಾಣಿ ಕಿತ್ತೂರು ರಾಣಿಚೆನ್ನಮ್ಮ ಸೌಹಾರ್ದ ಸಹಕಾರಿ ನಿ., ಕೊಪ್ಪಳ

● **ಒಬ್ಬ ಸದಸ್ಯ ಎಷ್ಟು ಜನರಿಗೆ ಸಾಲಕ್ಕಾಗಿ ಜಾಮೀನು ನೀಡಲು ಅವಕಾಶವಿದೆ.?**

ಈ ಬಗ್ಗೆ ಸಹಕಾರಿಯ ಸಾಲದ ನಿಯಮಾವಳಿಗಳಲ್ಲಿ ಸ್ಪಷ್ಟ ಅವಕಾಶ ಮಾಡಿಕೊಳ್ಳತಕ್ಕದ್ದು. ಗರಿಷ್ಠ ಇಬ್ಬರು ಸದಸ್ಯರಿಗೆ ಮಾತ್ರ ಸಾಲಕ್ಕಾಗಿ ಜಾಮೀನು ನೀಡಲು, ಮಿತಿ ನಿಗದಿಪಡಿಸುವದು ಒಬ್ಬ ಸದಸ್ಯನ ಆರ್ಥಿಕ ದೃಷ್ಟಿಯಿಂದ ಒಳ್ಳೆಯದು.

ಶ್ರೀ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸೌಹಾರ್ದ ಸಹಕಾರಿ ಬೆಳಗಾವಿ.

● **ಸಹಕಾರಿಯಲ್ಲಿ ಠೇವಣಿ ಮಾಡಲು ಬರುವ ಸದಸ್ಯರು ನಿಮ್ಮ ಸಹಕಾರಿಯ ಗ್ಯಾರಂಟಿ ಏನು? ಎಂದು ಕೇಳುತ್ತಾರೆ ವಿವರ ಕೊಡಿ?**

ನಿಮ್ಮ ಸಹಕಾರಿ ಪ್ರಾರಂಭವಾದ ನಂತರ ನೀವು ಮಾಡಿದ ವಿವಿಧ ಹೂಡಿಕೆಗಳನ್ನು ಕುರಿತು, ಸಹಕಾರಿಯು ಗಳಿಸುತ್ತಿರುವ ಲಾಭದ ಪ್ರಮಾಣದ ಕುರಿತು, ಸದಸ್ಯರಿಗೆ ಹಂಚುತ್ತಿರುವ ಲಾಭಾಂಶದ ಕುರಿತು, ಮತ್ತು ನಿಮ್ಮ ಸಹಕಾರಿಯ ಲೆಕ್ಕಪತ್ರಗಳನ್ನು ಸನ್ನದು ಲೆಕ್ಕಪರಿಶೋಧಕರು ಲೆಕ್ಕಪರಿಶೋಧನೆ ನಡೆಸಿ ಲೆಕ್ಕಪರಿಪರಿಶೋಧನಾ ವರದಿ ನೀಡುತ್ತಿರುವ ಕುರಿತು, ನಿಮ್ಮ ಸಹಕಾರಿಯಿಂದ ಗುಣಾತ್ಮಕ ಸಾಲಗಳನ್ನು ನೀಡಿದ ಬಗ್ಗೆ, ಸಾಲಗಳು ಶೇಕಡಾ 100 ರಷ್ಟು ವಸೂಲಾಗಿರುವ ಬಗ್ಗೆ, ಸಾಲಗಳು ಸಂಪೂರ್ಣವಾಗಿ ಭದ್ರತೆಯನ್ನು ಹೊಂದಿರುವ ಬಗ್ಗೆ ವಿವರ ನೀಡಿ. ನಿಮ್ಮ ಆಡಳಿತ ಮಂಡಳಿಯ ಸದಸ್ಯರು ಮತು ನಿಮ್ಮ ಸಿಬ್ಬಂದಿಯ ಸೇವಾ ಮನೋಭಾವ ಹಾಗೂ ಪ್ರಯತ್ನದಿಂದ ಪ್ರಗತಿಯನ್ನು ಸಾಧಿಸಲು ನೀಡುತ್ತಿರುವ ನೆರವಿನ ಕುರಿತು ಸವಿಸ್ತಾರವಾಗಿ ವಿವರಿಸಿ ಅವರ ಠೇವಣಿಗಳು ಭದ್ರವಾಗಿರುತ್ತವೆ ಎಂಬುದನ್ನು ಮನವರಿಕೆ ಮಾಡಿಕೊಡಿ.

ಗಿರಿಮಲ್ಲಪ್ಪ ಶ್ರೀ ಬಸವೇಶ್ವರ ಸೌಹಾರ್ದ ಸಹಕಾರಿ ನಿ ಕಲ್ಲೊಳ್ಳಿ

● **ಸಹಕಾರಿಯ ಒಟ್ಟು ಸದಸ್ಯರ ಸಂಖ್ಯೆಗಿಂತ ನಾಮಮಾತ್ರ ಸದಸ್ಯರ ಸಂಖ್ಯೆ 20% ಗಿಂತ ಹೆಚ್ಚಾಗಕೂಡದು ಎಂದು ಚಾರ್ಟರ್ಡ ಅಕೌಂಟೆಂಟರವರು ಹೇಳುತ್ತಾರೆ. ಇದು ಸರಿಯೆ?**

ಇದು ಸರಿಯಲ್ಲ, ನಾಮಮಾತ್ರ ಸದಸ್ಯರ ಸಂಖ್ಯೆಯನ್ನು ಮಿತಿಗೊಳಿಸಲು ಕಾಯ್ದೆಯಲ್ಲಿ ಯಾವುದೇ ಸ್ಪಷ್ಟ ಪ್ರಾವಧಾನವಿರುವುದಿಲ್ಲ. ಸಾಮಾನ್ಯವಾಗಿ ನಾಮ ಮಾತ್ರ ಸದಸ್ಯರನ್ನು ನಿರ್ದಿಷ್ಟ ಉದ್ದೇಶಕ್ಕಾಗಿ ಮಾಡಿಕೊಳ್ಳಲಾಗುತ್ತದೆ. ಈ ಕುರಿತು ಸಹಕಾರಿಯ ಉಪವಿಧಿಯಲ್ಲಿ ಏನಾದರೂ ಪ್ರಾವಧಾನ ಮಾಡಿಕೊಂಡಿದ್ದರೆ ಅಂಥಹ ಮಿತಿಯನ್ನು ಉಲ್ಲಂಘನೆ ಮಾಡುವಂತಿಲ್ಲ.

ನಯ್ಯೂಮ. ಎ ಗನಿ. ಗ್ರಾಮೀಣ ಮಹಿಳಾ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಬೀದರ್.

● **ಸಹಕಾರಿಯ ಒಬ್ಬ ಸಿಬ್ಬಂದಿಯು ಹಣದುರುಪಯೋಗಮಾಡಿದಾಗ ಅವನ ಮೇಲೆ ಯಾವ ರೀತಿಯ ಕ್ರಮ ಕೈಗೊಳ್ಳಬೇಕು. ಸಂಯುಕ್ತ ಸಹಕಾರಿಯಲ್ಲಿ ಈ ಬಗ್ಗೆ ನಿಯಮಾವಳಿಗಳೇನಾದರೂ ಇವೆಯೆ?**

ಸಹಕಾರಿಯ ಸಿಬ್ಬಂದಿಯು ಹಣದ ದುರುಪಯೋಗ ಮಾಡಿದಾಗ ಸಿಬ್ಬಂದಿಯ ವಿರುದ್ಧ ಸಹಕಾರಿಯ ನೌಕರರ ಸೇವಾನಿಯಮಾವಳಿ ಪ್ರಕಾರ ಶಿಸ್ತುಕ್ರಮವನ್ನು ಕೈಗೊಳ್ಳಬಹುದು. ಕಾಯ್ದೆ ಕಲಂ 39 ರನ್ವಯ ವ್ಯಾಜ್ಯವನ್ನು ಸಕ್ಷಮ ಪ್ರಾಧಿಕಾರ ಅಂದರೆ ಸಂಬಂಧಿಸಿದ ನಿಬಂಧಕರ ನ್ಯಾಯಾಲಯದಲ್ಲಿ ದಾಖಲಿಸಬೇಕು. ಸಿಬ್ಬಂದಿಯು ಸ್ಥಿರಾಸ್ತಿಯನ್ನು ಹೊಂದಿದ್ದಲ್ಲಿ ಕೂಡಲೇ ಅದರ ಮೇಲೆ ಋಣಭಾರ / ಭೋಜಾ ಇರಿಸಲು ಕಲಂ 44 ರನ್ವಯ ಪ್ರತ್ಯೇಕ ಅರ್ಜಿಯನ್ನು ಸ್ವತ್ತಿನ ಜಪ್ತಿಗಾಗಿ, ಸಕ್ಷಮ ಪ್ರಾಧಿಕಾರದ ಮುಂದೆ ದಾಖಲಿಸಬೇಕು. ಹಣ ದುರುಪಯೋಗದ ಮೊತ್ತ ಹೆಚ್ಚಾಗಿದ್ದಲ್ಲಿ ಭಾರತೀಯ ದಂಡ ಸಂಹಿತೆ ರನ್ವಯ ಕ್ರಿಮಿನಲ್ ಪ್ರಕರಣವನ್ನು ಸಹ ದಾಖಲಿಸಲು ಅವಕಾಶವಿರುತ್ತದೆ.

ಅನಾಮಿಕ

● **ಒಂದು ಸಹಕಾರಿಯು ಉತ್ತಮವಾಗಿ ಕಾರ್ಯನಿರ್ವಹಿಸಲು ಆಡಳಿತ ಮಂಡಳಿಯವರು ಮಾತ್ರ ಮುಖ್ಯ ಪಾತ್ರ ನಿರ್ವಹಿಸುತ್ತಾರೆಯೋ ಮುಖ್ಯಕಾರ್ಯನಿರ್ವಹಣಾಧಿಕಾರಿ ಮತ್ತು ಸಿಬ್ಬಂದಿಯವರು ಮುಖ್ಯವಲ್ಲವಾ?**

ಆಡಳಿತ ಮಂಡಳಿಯ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ಸಿಬ್ಬಂದಿಯ ಎಲ್ಲರ ಜಂಟಿ ನಿರ್ವಹಣೆ, ಸಹಕಾರಿಯ ಉತ್ತಮ ಕಾರ್ಯನಿರ್ವಹಣೆಗೆ ಅಗತ್ಯವಾಗಿದೆ.

ಕೆ.ನಾಗರಾಜ ಪ್ರಗತಿ ಪತ್ತಿನ ಸೌಹಾರ್ದ ಸಹಕಾರಿ ಹೊಸಪೇಟೆ.

● **ಒಂದು ಸಹಕಾರಿಯಲ್ಲಿ ನಿರ್ದೇಶಕರಾಗಿರುವವರು ಬೇರೊಂದು ಸಹಕಾರಿಯಲ್ಲಿಯೂ ನಿರ್ದೇಶಕರಾಗಿರಬಹುದೆ?**

ಸಹಕಾರಿಯಲ್ಲಿ ನಿರ್ದೇಶಕರಾಗಿರುವವರು ಬೇರೊಂದು ಸಹಕಾರಿಯಲ್ಲಿ ನಿರ್ದೇಶಕರಾಗಿರಬಹುದು.

ಅಧ್ಯಕ್ಷರು ದಾನೇಶ್ವರಿ ಸೌಹಾರ್ದ ಸಹಕಾರಿ ಹಾವೇರಿ.

● **ಸೌಹಾರ್ದ ಸಹಕಾರಿಗಳಿಗೆ ಸಹಾಯ ಧನ ನೀಡಲು ಸಂಯುಕ್ತ ಸಹಕಾರಿಯಲ್ಲಿ ಅವಕಾಶವಿದೆಯೆ?**

ಸಹಾಯ ಧನ ನೀಡಲು ಅವಕಾಶವಿಲ್ಲ.

● **ಅವಧಿಮೀರಿದ ಸಾಲಕ್ಕೆ ಬಡ್ಡಿಯನ್ನು ಹೆಚ್ಚಿಸಬಹುದೆ?**

ಸಾಲವನ್ನು ನೀಡುವಾಗ ಸಹಕಾರಿ ಹಾಗೂ ಸಾಲಗಾರನೊಂದಿಗೆ ಆದ ಒಪ್ಪಂದದ ಪ್ರಕಾರ ಸಾಲ, ಬಡ್ಡಿ, ದಂಡದ ಬಡ್ಡಿ ಇವುಗಳನ್ನು ಸಾಲಗಾರನು ಅವುಗಳನ್ನು ಮರುಪಾವತಿ ಮಾಡುವ ಸಂದರ್ಭದಲ್ಲಿ ನಿಗದಿತ ದರಗಳಲ್ಲಿಯೇ ಸಹಕಾರಿಯು ಪಡೆಯಬೇಕಾಗಿರುತ್ತದೆ. ಬಡ್ಡಿಯನ್ನು ಹೆಚ್ಚಿಸುವಂತಿಲ್ಲ.

● **ಕ್ಯಾಶರ ಬ್ಯಾಂಕಿಗೆ ಹಣ ಜಮಾಮಾಡಲು ಹೋಗುವಾಗ ವಿಮೆ ಮಾಡಿಸಬಹುದೇ. ಅವಕಾಶವಿದ್ದರೆ ಎಷ್ಟು ಮಾಡಿಸಬಹುದು?**

ವಿಮೆ ಮಾಡಿಸಬಹುದು, ವಿಮೆ ಮಾಡುವ ಪೂರ್ವದಲ್ಲಿ ಸಂಬಂಧಿಸಿದ ವಿಮೆಯ ಕುರಿತು ಸಂಪೂರ್ಣ ವಿವರವನ್ನು ತಿಳಿದುಕೊಳ್ಳುವುದು ಅವಶ್ಯ ವಿಮೆಯ ಮೊತ್ತ ಕ್ಯಾಶೀಯರ ಬ್ಯಾಂಕಿಗೆ ಪ್ರತಿ ಸಂದರ್ಭದಲ್ಲಿ ತೆಗೆದುಕೊಂಡು ಹೋಗುವ ಹಣದ ಮೊತ್ತದ ಮೇಲೆ ಅವಲಂಬಿತವಾಗಿರುತ್ತದೆ.

● **ಒಂದು ಸಹಕಾರಿಯಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಯಾಗಿರುವವರು ಇನ್ನೊಂದು ಸಹಕಾರಿಯಲ್ಲಿ ನಿರ್ದೇಶಕರಾಗಿ ಕಾರ್ಯನಿರ್ವಹಿಸಬಹುದೆ?**

ಒಂದು ಸಹಕಾರಿಯ ಮುಖ್ಯಕಾರ್ಯನಿರ್ವಹಣಾಧಿಕಾರಿಯು ಇನ್ನೊಂದು ಸಹಕಾರಿಯ ನಿರ್ದೇಶಕರಾಗಿ ಕಾರ್ಯನಿರ್ವಹಿಸಲು ಬರುವದಿಲ್ಲ. ಏಕೆಂದರೆ ಒಂದು ಸಹಕಾರಿಯ ಮುಖ್ಯಕಾರ್ಯನಿರ್ವಹಣಾಧಿಕಾರಿಯಾಗಿ ಮತ್ತು ಮತ್ತೊಂದು ಸಹಕಾರಿಯ ನಿರ್ದೇಶಕನಾಗಿ ಎರಡೂ ಸಹಕಾರಿಗಳ ಹಿತಾಸಕ್ತಿಯನ್ನು ಕಾಪಾಡಲು ಸಾಧ್ಯವಿಲ್ಲ.

ಗಾಯತ್ರಿ ಅರ್ಬನ್ ಸೌಹಾರ್ದ ಸಹಕಾರಿ ಹತ್ತರಗಿ ತಾ.ಹುಕ್ಕೇರಿ

● **ಸೌಹಾರ್ದ ಸಹಕಾರಿಗಳಿಗೆ ಸರಕಾರದಿಂದ ಸಾಲವನ್ನು ಪಡೆಯಲು ಬಡ್ಡಿ ರಿಯಾಯಿತಿ ಪಡೆಯಲು ಅಥವಾ ಸಹಾಯಧನವನ್ನು ಪಡೆಯಲು ಅವಕಾಶವಿದೆಯೆ?**

ಸಹಾಯಧನ ಪಡೆಯಲು ಅವಕಾಶವಿರುವದಿಲ್ಲ. ಕಾಯ್ದೆ ಕಲಂ 17(ii)ರನ್ವಯ ಒಂದು ಸಹಕಾರಿಯು, ಸರ್ಕಾರದಿಂದ ಅಥವಾ ಸರ್ಕಾರದ ಖಾತರಿಯಿಂದ ಯಾವುದೇ ಸಾಲ, ಸಹಾಯಧನ, ಅನುಧಾನ, ಅಥವಾ ಯಾವುದೇ ರೂಪದಲ್ಲಿ ಆರ್ಥಿಕ ನೆರವನ್ನು ಪಡೆಯುವಂತಿಲ್ಲ.

ಮುಂದಿನ ಸಂಚಿಕೆಗೆ...

# ವೃತ್ತಿಪರತೆ ಹಾಗೂ ವೃತ್ತಿ ಸಂಸ್ಕೃತಿಗಳು ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಅಗತ್ಯ



ಶ್ರೀ ಬಿ. ಎ. ಮಹದೇವಪ್ಪ
ಜಂಟಿ ನಿಬಂಧಕರು

ಈ ದೇಶದಲ್ಲಿ ಸಹಕಾರ ಕ್ಷೇತ್ರ ಕಾರ್ಯಾರಂಭ ಮಾಡಿ 107 ವರ್ಷಗಳು ಕಳೆದಿವೆ. 25 ಕೋಟಿ ಸದಸ್ಯತ್ವವಿರುವ 6 ಲಕ್ಷ ಸಹಕಾರಿ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. 38000 ಕೋಟಿರೂಗಳ ದುಡಿಯುವ ಬಂಡವಾಳವಿರುವ ಈ ಕ್ಷೇತ್ರ "ಆಡುಮುಟ್ಟದ ಸೊಪ್ಪಿಲ್ಲ ಕವಿಕಾಣದ ಸೊಬಗಿಲ್ಲ" ಎಂಬಂತೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನಸಾಮಾನ್ಯರ ಆರ್ಥಿಕ ಹಾಗೂ ಸಾಮಾಜಿಕ ಚಟುವಟಿಕೆಗಳ ಎಲ್ಲ ಮಜಲುಗಳಲ್ಲಿ ತನ್ನ ಕಾರ್ಯವನ್ನು ವಿಸ್ತರಿಸಿದೆ.

ಬದಲಾದ ಅರ್ಥವ್ಯವಸ್ಥೆಯಲ್ಲಿ ಸಹಕಾರ ಕ್ಷೇತ್ರಕ್ಕೆ ಹೆಚ್ಚಿನ ಮಹತ್ವ ಹಾಗು ಜವಾಬ್ದಾರಿ ಇದೆ. ಜಾಗತೀಕರಣ,ಖಾಸಗೀಕರಣ ಹಾಗು ಉದಾರೀಕರಣಗಳು ಸಹಕಾರಿ ಕ್ಷೇತ್ರಕ್ಕೆ ಸವಾಲಾಗಿವೆಯಾದರೂ ಸಹಕಾರಿ ಕ್ಷೇತ್ರ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿದೆ. ಆದರೆ ಸಧ್ಯದ ಕಾರ್ಯವ್ಯಾಪ್ತಿ ವ್ಯವಹಾರ ಕಾರ್ಯವೈಖರಿಯಲ್ಲಿ ಮಾರ್ಪಾಟು ಹಾಗು ಹೆಚ್ಚಿನ ದಕ್ಷತೆಯ ಅಗತ್ಯತೆ ಕಂಡುಬರುತ್ತಿದೆ. ಪ್ರತಿಯೊಂದು ವ್ಯವಸ್ಥೆಯಲ್ಲಿ ಹಳ್ಳಿಯಿಂದ ದೆಹಲಿಯ ವರೆಗೆ ಹೊಸತನಗಳು ಬದಲಾವಣೆಗಳನ್ನು ಕಾಣುವಾಗ ಸಹಕಾರಿ ಕ್ಷೇತ್ರದಲ್ಲೂ ಇದು ಅನಿವಾರ್ಯ.

ಈ ದೇಶದಲ್ಲಿ ಸಹಕಾರ ಕ್ಷೇತ್ರ ಕಾರ್ಯಾರಂಭ ಮಾಡಿ 107 ವರ್ಷಗಳು ಕಳೆದಿವೆ. 25 ಕೋಟಿ ಸದಸ್ಯತ್ವವಿರುವ 6 ಲಕ್ಷ ಸಹಕಾರಿ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. 38000 ಕೋಟಿರೂಗಳ ದುಡಿಯುವ ಬಂಡವಾಳವಿರುವ ಈ ಕ್ಷೇತ್ರ "ಆಡುಮುಟ್ಟದ ಸೊಪ್ಪಿಲ್ಲ ಕವಿಕಾಣದ ಸೊಬಗಿಲ್ಲ" ಎಂಬಂತೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನಸಾಮಾನ್ಯರ ಆರ್ಥಿಕ ಹಾಗೂ ಸಾಮಾಜಿಕ ಚಟುವಟಿಕೆಗಳ ಎಲ್ಲ ಮಜಲುಗಳಲ್ಲಿ ತನ್ನ ಕಾರ್ಯವನ್ನು ವಿಸ್ತರಿಸಿದೆ. ದೇಶದ ಅರ್ಥವ್ಯವಸ್ಥೆಯ ಅವಿಭಾಜ್ಯ ಅಂಗವಾಗಿ ಕಾರ್ಯನಿರ್ವಹಿಸುತ್ತಿದೆ. ಕರ್ನಾಟಕದಲ್ಲಿ 36250 ಕ್ಕೂ ಹೆಚ್ಚು ಸಹಕಾರಿ ಸಂಸ್ಥೆಗಳಿವೆ. ಇವುಗಳಲ್ಲಿ 34,375 ಕ್ಕೂ ಹೆಚ್ಚು 1959 ರ ಕಾಯ್ದೆಯಡಿಯಲ್ಲಿ 1625 ಕ್ಕೂ ಹೆಚ್ಚು ಹೆಚ್ಚು 1997 ರ ಸೌಹಾರ್ದ ಸಹಕಾರಿ ಕಾಯ್ದೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿವೆ. ಗ್ರಾಮೀಣ ಜನರ ಜೀವನಾಡಿಯಾಗಿ ಸಮಾಜದ ಕನಿಷ್ಠ ವ್ಯಕ್ತಿಯ ಬಾಳಿನ ಆಶಾಕಿರಣವಾಗಿ ಈ ಕ್ಷೇತ್ರ ಕಾರ್ಯನಿರ್ವಹಿಸುತ್ತಿದೆ.

ಈ ವ್ಯವಸ್ಥೆ ಯಾವುದೇ ಕಾರಣಕ್ಕೂ ದುರ್ಬಲವಾಗಬಾರದು ಎಂಬುದು ಆರ್ಥಿಕ ತಜ್ಞರ ಹಾಗು ಸಹಕಾರಿಗಳ ಅಭಿಪ್ರಾಯ ಹಾಗೂ ಕಳಕಳಿ. ಇದರ ದಕ್ಷತೆಯನ್ನು ಕಾಯ್ದುಕೊಂಡು ಸಹಕಾರಿಗಳಿಗೆ ಹೆಚ್ಚಿನ ಪ್ರಯೋಜನವಾಗಬೇಕಾದರೆ ಈ ವ್ಯವಸ್ಥೆಯನ್ನು ಬಲಪಡಿಸಬೇಕಾದರೆ ಇದರ ಕಾರ್ಯಾಚರಣೆಯಲ್ಲಿ ವೃತ್ತಿಪರತೆ ಇರಬೇಕಾಗುತ್ತದೆ. ವೃತ್ತಿಪರತೆ ಸಹಕಾರಿ ಸಂಸ್ಥೆಗಳ ಕಾರ್ಯಾಚರಣೆಯನ್ನು ಬಲಪಡಿಸುವುದರಲ್ಲಿ ಎರಡುಮಾತಿಲ್ಲ. ಅದನ್ನು ಅಳವಡಿಸಿಕೊಳ್ಳಲು ಅಗತ್ಯವಿರುವ ಎಲ್ಲ ಆಯಾಮಗಳನ್ನು ಸಹಕಾರಿ ಸಂಸ್ಥೆಗಳು ಮುಂದಾಗಬೇಕಾಗಿದೆ.

ವೃತ್ತಿಪರತೆ ಅಂದರೆ ಸಹಕಾರಿ ಕ್ಷೇತ್ರದಲ್ಲಿ ಪರಿಣತಿಪಡೆದ ಹಾಗೂ ಪೂರಕ ವಿಷಯಗಳ ಜ್ಞಾನಪಡೆದಿರುವವರಿಂದ ಕಾರ್ಯನಿರ್ವಹಣೆಗೆ ಅವಕಾಶ ಒದಗಿಸುವುದು. ಕಚೇರಿ ಆಡಳಿತ,ಹಣಕಾಸಿನ ಆಡಳಿತ ಸಮಯ ನಿರ್ವಹಣೆ ಗ್ರಾಹಕ ಸೇವೆಗಳ ನಿರ್ವಹಣೆ, ರಿಸ್ಕ ನಿರ್ವಹಣೆ, ಕಾನೂನು ವಿಷಯಗಳ ಜ್ಞಾನ, ಉಪವಿಧಿಗಳ ಜ್ಞಾನ, ಪರಿಸರ ನಿರ್ವಹಣೆ, ಆಡಳಿತ ವಿಷಯಗಳ ಜ್ಞಾನ, ಮಾಹಿತಿ ಹಾಗೂ ತಂತ್ರಜ್ಞಾನಗಳು ಇತ್ಯಾದಿಗಳ ಬಗ್ಗೆ ಆಡಳಿತ ಮಂಡಳಿಯವರು ಹಾಗೂ ಅಧಿಕಾರಿ ಹಾಗೂ ಸಿಬ್ಬಂದಿವರ್ಗದವರು ಮಾಹಿತಿ ಹೊಂದಿರಬೇಕಾಗುತ್ತದೆ. ಈ ಎಲ್ಲ ವಿಷಯಗಳ ಬಗ್ಗೆ ಜ್ಞಾನವಿಲ್ಲದೆ ಕಾರ್ಯನಿರ್ವಹಿಸುವುದು ಅಪಾಯಕಾರಿ ಹಾಗೂ ಅಭಿವೃದ್ಧಿಗೆ ಮಾರಕವೆನಿಸುವುದಿಲ್ಲ. ಆದ್ದರಿಂದ ವೃತ್ತಿಪರತೆಯನ್ನು ಅಳವಡಿಸುವುದು ಇಂದಿನ ಅಗತ್ಯತೆ ಯೆನಿಸುತ್ತದೆವೃತ್ತಿಪರತೆ ಅಂದರೆ ನಾವು ಮಾಡುವ ಕೆಲಸದಲ್ಲಿ ನೈಪುಣ್ಯತೆ ಮತ್ತು ಪರಿಪೂರ್ಣತೆ ಎಂತಲೂ ಅರ್ಥೈಸಬಹುದು. ನಾವು ಏಕೆ ಕೆಲಸಮಾಡುತ್ತೇವೆ ಎಂದು ಪ್ರಶ್ನಿಸಿದಾಗ ಉತ್ತರ ಬಹಳ ಸರಳವಾಗಿದೆ. ಉಣಲು ಅನ್ನ – ಉಡಲು ಬಟ್ಟೆ – ಹಾಗು ವಾಸಿಸಲು ಮನೆ. ಇಷ್ಟಕ್ಕೆ ನಾವು ಮಾಡುವ ಕೆಲಸ ಸಾಕಾಗುವುದಿಲ್ಲ. ನಮಗೆ ಇನ್ನೂ ಹೆಚ್ಚಿನ ಅಪೇಕ್ಷೆಗಳಿವೆ.

ಜೀವನಕ್ಕೆಭದ್ರತೆ–ಸ್ಥಿರತೆ–ಸಾಮಾಜಿಕಸ್ಥಾನಮಾನ–ವೈಯಕ್ತಿಕ ಬೆಳವಣಿಗೆ–ಸಮಾಜ ಸೇವೆ–ಆತ್ಮ ತೃಪ್ತಿ ಇತ್ಯಾದಿಗಳು. ಇವೆಲ್ಲವುಗಳನ್ನು ಅಪೇಕ್ಷಿಸುವ ನಾವು ನಮ್ಮ ಕೆಲಸದಲ್ಲಿ ತೃಪ್ತಿಯನ್ನು ಕಂಡುಕೊಳ್ಳಬೇಕಾಗುತ್ತದೆ. ತೃಪ್ತಿಯಿರದ ಕೆಲಸವನ್ನು ಶ್ರದ್ಧೆಯಿಂದ ನಿರ್ವಹಿಸಲಿಕ್ಕಾಗುವುದಿಲ್ಲ.ವೃತ್ತಿಪರತೆಯ ಕಾರ್ಯನಿರ್ವಹಣೆಯಲ್ಲಿ ವಿಷಯ ಜ್ಞಾನಗಳ ಜೊತೆಗೆ ವೃತ್ತಿ ಸಂಸ್ಕೃತಿಯನ್ನು ರೂಢಿಸಿಕೊಂಡಲ್ಲಿ ಅಭಿವೃದ್ಧಿಯು ಸಾಕಾರಗೊಳ್ಳುತ್ತದೆ. ಅಭಿವೃದ್ಧಿ ಸಾಕಾರಗೊಳ್ಳಲು ರೂಢಿಸಿಕೊಳ್ಳ

## ಬೇಕಾದ ಮಹತ್ವದ ಕೆಲವು ವಿಷಯಗಳು

- ಕೆಲಸದಲ್ಲಿ ಬದ್ಧತೆ, ತಲ್ಲೀನತೆ, ಸಾಮಾಜಿಕ ಬದ್ಧತೆ ಹಾಗೂ ವ್ಯವಹಾರದಲ್ಲಿ ಸಭ್ಯತೆ.
- ಸಾಮರ್ಥ್ಯ ಹೆಚ್ಚಿಸುವ ಕಲಿಕೆ ಮನೋಭಾವ ಬೆಳೆಸಿಕೊಳ್ಳುವ ಸ್ವಭಾವವಿರಬೇಕು.
- ಶಿಸ್ತು ಸಮಯಪಾಲನೆಗೆ ಆದ್ಯತೆಯಿರಬೇಕು. ಉಡುಗೆ ತೊಡುಗೆ ಸ್ವಚ್ಛವಾಗಿರಬೇಕು.
- ಪರಿಸರ ನಿರ್ಮಲವಾಗಿರಬೇಕು.ಕಚೇರಿ ವೇಳೆಯನ್ನು ಅಪವ್ಯಯ ಮಾಡಬಾರದು.
- ಸಾರ್ವಜನಿಕರ ಅಹವಾಲುಗಳಿಗೆ ತಕ್ಷಣ ಸ್ಪಂದಿಸಬೇಕು. ಪರಿಹಾರ ಒದಗಿಸುವ ಪ್ರಾಮಾಣಿಕ ಪ್ರಯತ್ನ ಮಾಡಬೇಕು.
- ನಗುಮುಖದಿಂದ ಕಾರ್ಯನಿರ್ವಹಣೆಯನ್ನು ಅಭ್ಯಾಸ ಮಾಡಿಕೊಳ್ಳಬೇಕು. ಮನದಲ್ಲಿ ಹರ್ಷತೆಯಿರಬೇಕು.
- ಜವಾಬ್ದಾರಿಯಿಂದ ನುಸುಳಿಕೊಳ್ಳುವ ಸ್ವಭಾವ ವಿರಬಾರದು. ಸಾಧನೆಯಲ್ಲಿ ದೃಢತೆಯಿರಬೇಕು.
- ಉತ್ತಮ ಮಾರಾಟಗಾರನ ಎಲ್ಲ ಗುಣಲಕ್ಷಣಗಳನ್ನು ಹೊಂದಿರಬೇಕು. ಕೆಲಸವನ್ನು ವಿಂಗಡಿಸಬೇಕು. ಆದ್ಯತಾವಲಯವನ್ನು ಗುರುತಿಸಬೇಕು.
- ತನ್ನ ವ್ಯಕ್ತಿತ್ವ ಇರುವಿಕೆಯನ್ನು ಎಲ್ಲರೂ ಗಮನಿಸುವಂತೆ ಕಾರ್ಯ ನಿರ್ವಹಿಸಬೇಕು.
- ಅನುಕರಣೀಯ, ಆದರಣೀಯ ಅಪೇಕ್ಷಣೀಯ ವ್ಯಕ್ತಿತ್ವವುಳ್ಳವರಾಗಿರಬೇಕು.

ವೃತ್ತಿಪರತೆ ಇಲ್ಲದ ಕಾರ್ಯ ಅಪಕ್ವವೆನಿಸುತ್ತದೆ. ವೃತ್ತಿಪರತೆ ನಮ್ಮ ಸಂಸ್ಕೃತಿಯ ಒಂದು ಭಾಗ. ಆದ್ದರಿಂದ ಈ ಗುಣಗಳನ್ನು ಬೆಳೆಸಕೊಂಡಲ್ಲಿ ವೃತ್ತಿಪರತೆಯನ್ನು ರೂಢಿಸಿಕೊಂಡಂತಾಗುತ್ತದೆ. ವೃತ್ತಿಪರತೆಯಿಂದ ಅಭಿವೃದ್ಧಿಯನ್ನು ನಿರೀಕ್ಷಿಸಬಹುದಾಗಿದೆ. ಸಹಕಾರಿ ಕ್ಷೇತ್ರದಲ್ಲಿ ಇದಕ್ಕೆ ಹೆಚ್ಚಿನ ಆದ್ಯತೆನೀಡುವ ಅವಶ್ಯಕತೆ ಇದೆ.

**Q. can our staff attend the A.G.M. as our firms representative ? or Only partners have to attend?**

A. No. As per section 33 (5) of K S S Act, 1997, the auditor should attend the general body of the co-operative and he can not delegate this power to any other person. However, it is recommended to fix the general body in consultation with the auditor concerned.

**Q.1.What is the exact difference between the co-operative credit society and souharda?**

A. A credit co-operative society is registered under the Karnataka Co-operative Societies Act, 1959 whereas Souharda cooperative is registered under the Karnataka Souharda Sahakari Act, 1997. There is a provision in the 1959 Act for the Government interference. But there is no provision in the 1997 Act for any interference of the Government. Self management, self control and full freedom is given under the 1997 Act. There are no government grants for Souharda Co-operatives. Audit is carried out by the Chartered Accountants is Souharda Co-operatives, whereas in case of co-operative societies audit is carried out by co-operative audit department.

Q. Our unit (coop credit society is registered with A.R.(Belgaum). Can it be converted into souharda? .If so what steps to be followed.

A. Yes. Your credit cooperative society can be converted to souharda. Please follow the guidelines issued by the Souharda Federal Co-operative in this behalf.

**Q. Whether co-operative can pay dividend to regular member & associate members at different rates?**

A. No. There is no provision in K S S Act to do so. As per co-operative principles all members are equal for distribution of dividend.

**Q. Section 269 SS of Income Tax Act:- cash deposit exceeding Rs.20,000 first credited to SB A/c or Current A/c and then transferred to term deposit. Is it violation of the I.T Act, Sec. 269SS.**

A. Section 269SS of the Income Tax Act, 1961 specifies the mode of taking or accepting certain loan or deposits. According to the existing provisions of the Income Tax Act no person shall accept from any other person in excess of Rs.20000/- in cash from any other person and hence from the plain reading of the section accepting cash in excess of Rs.20000/- is in violation of section 269SS. However, this provision is not applicable to banking company, post office savings bank or co-operative bank. Incase of co-operatives one can take a stand that the depositing cash in savings account by a member of co-operative, in my opinion is not in violation of section 269SS as the deposit is not in the nature of deposit from "any other person". It is putting money in your own account.



ಬೆಂಗಳೂರು, ಬೆಳಗಾವಿ ಹಾಗೂ ಗುಲ್ಬರ್ಗಾದಲ್ಲಿ ನಡೆದ ಲೆಕ್ಕಪರಿಶೋಧಕರ ಕಾರ್ಯಾಗಾರಗಳಲ್ಲಿ ಭಾಗವಹಿಸಿದ ಲೆಕ್ಕ ಪರಿಶೋಧಕರ ಪ್ರಶ್ನೆಗಳಿಗೆ ಸಂಯುಕ್ತ ಸಹಕಾರಿಯ ಲೆಕ್ಕಪರಿಶೋಧಕ ಶ್ರೀ ಮಧುಕರ ಹೆಗಡೆಯವರು ಉತ್ತರಿಸಿದ್ದಾರೆ. ರಾಜ್ಯದ ಎಲ್ಲ ಲೆಕ್ಕಪರಿಶೋಧಕರ ಮಾಹಿತಿಗಾಗಿ ಈ ಪ್ರಶ್ನೋತ್ತರಗಳನ್ನು ಪ್ರಕಟಿಸಲಾಗಿದೆ.

**Q. Now I am applying for empanelment. Whether I can get Audit for the year 2010-11.**

A. No. The empanelment of Chartered Accountants for conducting the audit for 2010-11 was prepared by the Federal Co-operative about 2 years back. The present empanelment is for the years 2011-12 and 2012-13.

**Q. Auditor who is indebted to the society can be appointed as auditor. Whether he can take loan after appointment.**

A. No. As per the institute guidelines (ICAI) any person having liability of Rs.1000/- or more cannot accept the appointment as auditor of that cooperative.

**Q. Sitting fees to director is there any minimum or maximum limit.**

A. There is no minimum or maximum limit prescribed in the KSS Act. It is the prerogative of the General Body of the concerned cooperative.

**Q. Whether annual information report has to be filed by the souharda?**

A. Section 285BA of the Income Tax Act, 1961 read with rule 114E provides that the AIR shall be filed by class of person specified in the table in respect of specified transactions. The co-operatives are not included in the said table and hence co-operatives are not required to file the same. However if the information is sought specifically in writing you are required furnish the same.

**Q. F.D. made by the coop society with National Bank whether TDS is applicable?.**

A. As per section 194A of the Income Tax Act, provisions contained in the said section are not applicable if the payee is the co-operative society. Hence deposits made in commercial bank are not subject to TDS. However few of the banks due to lack of awareness are deducting tax at source. One should also note that the interest earned on investment with commercial bank is not eligible for deduction under section 80P(2) and subject to tax.

**Q. What will be the impact of Direct Tax Code Bill on Souharda Act & Rules?**

A. Provisions and impact are given separately in the article.

**Q. When a new CA enters into Audit Panel what are the chances of getting the audit?**

A. Section 53(7)(T) of KSS Act, 1997 empowers Federal Co-

12ನೇ ಪುಟಕ್ಕೆ...

Swabhimani Sahakari, Monthly, Posted at GPO-MBC Post Office 560001,
Posting Day 12th. Reg. No. RNP/BGS/2094/20011-13 Licence to post
RNI No.: KARBILO 2004/18001

## ಪತ್ತಿನ ಸೌಹಾರ್ದ ಸಹಕಾರಿಗಳು ಶಾಖೆತೆರೆಯುವ ಬಗ್ಗೆ

ಪತ್ತಿನ ಸೌಹಾರ್ದ ಸಹಕಾರಿಗಳು ಶಾಖೆ ತೆರೆಯುವ ಬಗ್ಗೆ ಅನುಸರಿಸಬೇಕಾದ ಮಾನದಂಡಗಳ ಬಗ್ಗೆ ಕ.ಸೌ.ಸ. ಅಧಿನಿಯಮ 1997 ರ ಕಲಂ 53 ( 7 ) (ಎ) ಹಾಗು (ಎಚ್) ಅಡಿ ಸಂಯುಕ್ತ ಸಹಕಾರಿಯ ಸುತ್ತೋಲೆಯನ್ನು 15/2005–06 ದಿನಾಂಕ 25 ಮಾರ್ಚ 2006 ನ್ನು ಸೌಹಾರ್ದ ಸಹಕಾರಿಗಳ ಮಾಹಿತಿಗಾಗಿ ಮತ್ತೊಮ್ಮೆ ಪ್ರಕಟಿಸಲಾಗಿದೆ. ಶಾಖೆ ಪತ್ತಿನ ಸೌಹಾರ್ದ ಸಹಕಾರಿಗಳು

**ಸೌಹಾರ್ದ ಪತ್ತಿನ ಸಹಕಾರಿಗಳು ಶಾಖೆ ತೆರೆಯುವಾಗ**
**ಅನುಸರಿಸಬೇಕಾದ ಮಾನದಂಡಗಳು**

ಕ.ಸೌ.ಸ. ಅಧಿನಿಯಮ, 1997ರ ಕಲಂ 53 (7) (ಎ) ಹಾಗೂ (ಎಚ್) ಅಡಿ

ಸಂಖ್ಯೆ : ಸುತ್ತೋಲೆ 15/2005–06 ದಿನಾಂಕ : 25 ಮಾರ್ಚ್ 2006

1. ಹೊಸ ಶಾಖೆಯನ್ನು ತೆರೆಯ ಬಯಸುವ ಪತ್ತಿನ ಸಹಕಾರಿಗಳು ಎಲ್ಲಾ ರೀತಿಯ ಶಾಸನಬದ್ಧ ವಿಲೇವಾರಿಗಳನ್ನು ಮತ್ತು ಕೊಡಬೇಕಾದ ಬಡ್ಡಿಗೆ ಪ್ರಾವಧಾನ ಮಾಡಿದ ನಂತರವೂ ನಿರಂತರ ಮೂರು ವರ್ಷ ಲಾಭ ಗಳಿಸಿರತಕ್ಕದ್ದು.
2. ಓವರ್ ಡ್ಯೂ ಪ್ರಮಾಣವು ಸಾಲ ಮತ್ತು ಮುಂಗಡಗಳ ಶೇ. 15ನ್ನು ಮೀರಿರಬಾರದು ಅಥವಾ ಸ್ವಂತ ಬಂಡವಾಳದ ಶೇ.50ನ್ನು ಮೀರಿರಬಾರದು.
3. ಆರಂಭವಾದ ಹೊಸ ಶಾಖೆಯ ಖರ್ಚು ವೆಚ್ಚಗಳನ್ನು ಪ್ರಸ್ತುತ ಇರುವ ಶಾಖೆಯು ಮುಂದಿನ ಮೂರು ವರ್ಷ ಭರಿಸಲು ಸಕ್ಷಮವಾಗಿರಬೇಕು. ಹಾಗೆ ಖರ್ಚು ವೆಚ್ಚಗಳನ್ನು ಭರಿಸಿದ ನಂತರ ಹಾಗೂ ಎಲ್ಲಾ ರೀತಿಯ ಶಾಸನಬದ್ಧ ವಿಲೇವಾರಿಗಳನ್ನು ಮತ್ತು ಕೊಡಬೇಕಾದ ಬಡ್ಡಿಗೆ ಪ್ರಾವಧಾನ ಮಾಡಿದ ನಂತರವೂ ಲಾಭ ಗಳಿಸುವಂತಿರಬೇಕು.
4. ಮೇಲಿನ ಅರ್ಹತೆಗಳನ್ನು ಹೊಂದಿದ ಸಹಕಾರಿಗಳು ಮಾತ್ರ ತಮ್ಮ ಸಾಮಾನ್ಯ ಸಭೆಯಲ್ಲಿ ಹೊಸ ಶಾಖೆಯ ಆರಂಭಕ್ಕೆ ಪ್ರಸ್ತಾವನೆ ಸಲ್ಲಿಸತಕ್ಕದ್ದು. ಸಾಮಾನ್ಯ ಸಭೆಯ ಎದುರು ಹೊಸ ಶಾಖೆಯ ಆರಂಭದ ಕಾರ್ಯ ಸಾಧ್ಯತಾ ವರದಿಯನ್ನು ಮಂಡಿಸಿ ಸಾಮಾನ್ಯ ಸಭೆಯ ಅನುಮೋದನೆ ಪಡೆಯತಕ್ಕದ್ದು. ಅಂತಹ ಕಾರ್ಯ ಸಾಧ್ಯತಾ ವರದಿಯನ್ನು ಸಾಮಾನ್ಯ ಸಭೆಗೆ ಮುಂಚಿತವಾಗಿ ಸಂಯುಕ್ತ ಸಹಕಾರಿಗೆ ಸಲ್ಲಿಸತಕ್ಕದ್ದು.
5. ಹೊಸ ಶಾಖೆ ಆರಂಭವಾದ 15 ದಿನಗಳಲ್ಲಿ ಸಂಯುಕ್ತ ಸಹಕಾರಿಗೆ ವರದಿಯನ್ನು ಸಲ್ಲಿಸತಕ್ಕದ್ದು.
6. ಮೇಲಿನ 1, 2 ಹಾಗೂ 3ರಲ್ಲಿ ಅರ್ಹತೆಗಳನ್ನು ಹೊಂದದೇ ಯಾವುದೇ ಸಹಕಾರಿಯು ಶಾಖೆಯನ್ನು ಆರಂಭಿಸಿದಲ್ಲಿ ಹಾಗೆ ನಿರ್ಣಯ ಕೈಗೊಂಡ ಮಂಡಳಿಯ ಮೇಲೆ ಸಂಯುಕ್ತ ಸಹಕಾರಿಯು ಕಾಯ್ದೆ ಕಲಂ 38(1)(iv) ರಡಿ ಕ್ರಮ ಜರುಗಿಸುತ್ತದೆ ಅಲ್ಲದೇ ಅಂತಹ ಶಾಖೆಯನ್ನು ರದ್ದುಗೊಳಿಸುವಂತೆ ಸಹಕಾರಿಗೆ ನಿರ್ದೇಶನ ನೀಡುತ್ತದೆ.

ಈ ಮಾನದಂಡಗಳನ್ನು ನನ್ನ ಮೊಹರು ಹಾಗೂ ಸಹಿಯೊಂದಿಗೆ ಇಂದು ಅಂದರೆ, 25 ಮಾರ್ಚ್ 2006 ನೀಡಲಾಗಿದೆ.

ಸಹಿ/–
**(ಅನೂಪದೇಶಪಾಂಡೆ)**
ವ್ಯವಸ್ಥಾಪಕ ನಿರ್ದೇಶಕ

## ಸೌಹಾರ್ದ ಸಹಕಾರಿಗಳ ಮಾಹಿತಿಗಾಗಿ ಸಹಕಾರಿಯ ಸಂಪರ್ಕ ದೂರವಾಣಿಗಳು

| | | |
|---|---|---|
| ಅಧ್ಯಕ್ಷ | ಶ್ರೀ ಎಸ್. ಆರ್. ಸತೀಶಚಂದ್ರ | 9448696108 |
| ಉಪಾಧ್ಯಕ್ಷ | ಶ್ರೀ ಗುರುನಾಥ ಜ್ಯಾಂತಿಕರ | 9448270104 |
| ವ್ಯವಸ್ಥಾಪಕ ನಿರ್ದೇಶಕ | ಶ್ರೀ ಶರಣಗೌಡ ಜಿ. ಪಾಟೀಲ | 9740401685 |
| ಉಪ ಪ್ರಧಾನ ವ್ಯವಸ್ಥಾಪಕ | ಶ್ರೀ ನಾರಾಯಣ ಹೆಗಡೆ | 9480579882 |
| ಉಪ ಪ್ರಧಾನ ವ್ಯವಸ್ಥಾಪಕ | ಶ್ರೀ ವೈ. ಕುಮಾರ | 9845893455 |
| ತರಬೇತಿ ಅಧಿಕಾರಿ | ಶ್ರೀ ವಿ.ಜೆ. ಕಾರಕೂನ | 9482734077 |
| ಬೆಳಗಾವಿ ವಿಭಾಗಾಧಿಕಾರಿ | ಶ್ರೀ ಜಿ.ಎಸ್. ತೋಂಟಾಪೂರವರ್ | 9916367887 |

ಬೆಳಗಾವಿ ವಿಭಾಗೀಯ ಕಛೇರಿಯ ವಿಳಾಸ : ನಂ.436, ಹುಯಿಲಗೋಳ ಕಾಂಪ್ಲೆಕ್ಸ್, ಶಹಾಪುರ, ಬೆಳಗಾವಿ – 1. ದೂ. 0831–2401551

ಇವರಿಂದ ಪ್ರಕಟಣೆ : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ನಿರ್ಮಾಣ ಭವನ ಆವರಣ, ಡಾ. ರಾಜಕುಮಾರ ರಸ್ತೆ, (ವಿವೇಕಾನಂದ ಕಾಲೇಜು ಎದುರು) ಒಂದನೇ ಬ್ಲಾಕ್ ರಾಜಾಜಿನಗರ, ಬೆಂಗಳೂರು - 560010.
ದೂರವಾಣಿ ಸಂಖ್ಯೆಗಳು : 23378375/76/77/78/79/80 ಹಾಗೂ 23474408, 23573291
ಸಂಪಾದಕ, ಪ್ರಕಾಶಕ: ಶರಣಗೌಡ ಜಿ. ಪಾಟೀಲ, ಮುದ್ರಣ : ರಕ್ಷಾ ಕಮ್ಯೂನಿಕೇಷನ್ಸ್, ಬೆಂಗಳೂರು. ಸಂಚಿಕೆ ಸಿದ್ಧತೆ ವಿ.ಜೆ.ಕಾರಕೂನ

## ಲೆಕ್ಕಪರಿಶೋಧಕರ ಮಾಹಿತಿಗಾಗಿ ಪ್ರಶ್ನೋತ್ತರ...

...11ನೇ ಪುಟದಿಂದ

operative to make panel of Auditors and send it to member co-operatives. The Federal co-operative can issue guide lines for smooth conducting of audit. However as per Section 33 (1) of the KSS Act, 1997 right of appointment of the auditors rests with the General Body of the concerned cooperative and hence federal cooperative cannot give directions in appointment of auditors. However the federal cooperative has issued circulars to all cooperatives stating that the cooperatives have to appoint auditors out of the panel only.

**Q. Income from e-stamping whether deduction available u/s 80P?**

A. No. E-stamping activity is not a banking activity and deduction under section 80P is not available. However co-operative concerned can maintain separate books of accounts and records for e-stamping activity and can claim all the expenditure like rent, salary, depreciation on computers ,electricity, stationery etc spent for e-stamping activity and the income arrived after deducting all these expenditures is only subject to tax.

**Q. Regarding appointment of auditors-by society. Why not appointment shall be made by the Karnataka State Souharda Federal Co-operative itself directly to make the audit more transparent/independent.**

A. As per the existing provisions explained in one of the answers above it is not possible. It requires amendment to KSS Act. One should also note that this may defeat the very purpose of Souharda Act.

**Q. In a souharda co-op depreciation fund created in liability side and gross block of asset shown in assets side. Now what is the remedy.(But depreciation calculated on WDV method . Now what is the remedy?**

A. You can continue with the same procedure of accounting of depreciation in future also. Alternatively you can pass the journal entry by debiting depreciation reserve and crediting concerned assets to arrive at the written down value at the year end. You have to follow WDV method of depreciation accounting only.